ಮಾನಸಿ

ಏಪ್ರಿಲ್ 2005 ತಿಂಗಳ ಪತ್ರಿಕೆ

- "ನೇಪಾಳದ ಹೆಣ್ಣು ಮಕ್ಕಳಿಗೆ ಭಾರತ ಪರಿಹಾರ ನೀಡಬೇಕು"
- ಹೀಗೊಂದು ಅಂತರಾಳದ ಮಾತು (ಲೈಂಗಿಕ ದೌರ್ಜನ್ಯ ಕುರಿತು)
- ಪುಸ್ತಕ - ಪರಿಚಯ
- ಗುಡ್ಡ ಗಾಡು ಜನರಲ್ಲಿ ಶಿಶುಹತ್ಯೆ
- ನಡು ಮಧ್ಯಾಹ್ನದ ಪ್ರಣಯ
- ಮಹಿಳೆ, ಕಾರ್ಮಿಕ ಚಳುವಳಿಯ ಚಾಲಕ ಶಕ್ತಿಯಾಗಬಲ್ಲಳು
- ವೆನ್ನೆಲ ದೊರಸಾನಿ
- ಒಂದು ಮರೆತು ಹೋದ ಕತೆ - ಕಲಕತ್ತ ಗೌಹರ್ ಜಾನ್

ಮಾನಸ ತಿಂಗಳ ಪತ್ರಿಕೆ ಏಪ್ರಿಲ್ 2005

ಸಂಪುಟ : 20 ಸಂಚಿಕೆ : 4

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ - ಪೋಸ್ಟ್
ಬೆಂಗಳೂರು - 560 067

ಸೂಚನೆ :

ಬಿಡಿಪ್ರತಿ	10-00 ರೂ.
ವಾರ್ಷಿಕ ಚಂದಾ	100-00 ರೂ.
ಸಂಸ್ಥೆಗಳಿಗೆ	150-00 ರೂ.

ಈ ಸಂಚಿಕೆಯಲ್ಲಿ.....

ಮೈಸೂರು

ಮೈಸೂರಿನಲ್ಲಿ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
ವೆಂ.ವನಜ : 2329, 12ನೇ ಮೇನ್, 2ನೇ ಹಂತ ವಿಜಯನಗರ, ಮೈಸೂರು - 570 017

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ-ಅಂಚೆ, ಬೆಂಗಳೂರು - 560 067

ಸಂಪಾದಕೀಯ



ಜಾಗತೀಕರಣ, ಕನ್ಸೂಮರಿಸಂ ಹೆಚ್ಚಾದ ಹಾಗೆ ಮಹಿಳೆಯರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ ವಿಭಿನ್ನ ಮುಖಗಳನ್ನು ಪಡೆದುಕೊಳ್ಳುತ್ತಿದೆ. ಹಿಂಸೆಯ ಮುಖಗಳು ಅಮಾನುಷ ಕ್ರೌರ್ಯಗಳಾಗಿ ಪರಿವರ್ತಿಸಿವೆ. 2 ತಿಂಗಳ ಹಸುಳೆಯ ಮೇಲೆ 8-10 ವರ್ಷದ ಬಾಲಕಿಯರ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿ, ಗಟಾರಗಳಿಗೆ ಎಸೆಯುವುದು ಸಾಮಾನ್ಯ ಸಂಗತಿಯಾಗತೊಡಗಿದೆ. ಅಪ್ಪನೇ ತನ್ನ ಹಾಲು ಹಸುಳೆ ಮಕ್ಕಳ ಮೇಲೆ ಅತ್ಯಾಚಾರ ಮಾಡಿ, ಅದನ್ನು ಮುಚ್ಚಿ ಹಾಕುವ ವರದಿಗಳೂ ಸಾಕಷ್ಟು ಪ್ರಕಟವಾಗುತ್ತಿವೆ.

ಶಾಲಾ ಬಾಲಕಿಯರು ಹಾಗೂ ಇತರರ ಮೇಲೆ ನಡೆಯುವ ಈ ಲೈಂಗಿಕ ದೌರ್ಜನ್ಯವನ್ನು ವ್ಯವಸ್ಥಿತವಾಗಿ ತಡೆಗಟ್ಟಲು ಲೈಂಗಿಕ ಶಿಕ್ಷಣದ ಅಗತ್ಯವಿದೆ. ಹಾಗಾಗಿ ಪ್ರಾಥಮಿಕ ಹಂತದಿಂದಲೇ ಎಳೆಯ ಮಕ್ಕಳಿಗೆ ಅವರ ದೇಹದ ಬಗ್ಗೆ ಅರಿವು ಮಾಡುವಂತೆ ಮಾಡಬೇಕು. ಈ ಸಮಾಜದ ದುಷ್ಟ ಶಕ್ತಿಗಳು ಅವರ ಮೇಲೆ ಎಸಗಬಹುದಾದ ದೌರ್ಜನ್ಯಗಳ ಬಗ್ಗೆ ಬಾಲಕಿಯರಿಗೆ ಮಾಹಿತಿ ನೀಡಬೇಕು. ಹಾಗೆಯೇ ಬಾಲಕಿಯರ ಹಂತದುಲ್ಲಿಯೇ ಈ ದೌರ್ಜನ್ಯವನ್ನು ಎದುರಿಸುವ ಕೆಲವು ರಕ್ಷಣಾತ್ಮಕ ಕ್ರಮಗಳನ್ನು ಅವರಿಗೆ ಕಲಿಸಬೇಕು.

ಹಸುಗೂಸುಗಳ ಮೇಲೆ ನಡೆಯುವ ಕ್ರೌರ್ಯದ ಬಗ್ಗೆಗಿನ ಮಾಹಿತಿಯಿಂದಾಗಿ ಎಲ್ಲರಲ್ಲಿ ಒಂದು ಬಗೆಯ ಎಚ್ಚರವಿರುತ್ತದೆ. ಲೈಂಗಿಕ ದೌರ್ಜನ್ಯ ಕುಟುಂಬದವರಿಂದ, ಪರಿಚಯಸ್ಥರಿಂದ, ಸುತ್ತ ಮುತ್ತಲಿನವರಿಂದಲೇ, ನಡೆಯಬಹುದು ಎನ್ನುವ ಪರಿಜ್ಞಾನವಿದ್ದಾಗ ಮಕ್ಕಳೂ ಸಹ ಇಂತಹದರ ಬಗ್ಗೆ ಎಚ್ಚರವಹಿಸಬಹುದಾಗಿದೆ. ಅಪಾಯಕಾರಿ ವ್ಯಕ್ತಿಗಳಿಂದ ದೂರವಿರುವ ಬಗ್ಗೆ, ಕುಟುಂಬ ಸಂಬಂಧಗಳಲ್ಲೂ ಜಾಗ್ರತೆವಹಿಸುವ ಬಗ್ಗೆ ಮಕ್ಕಳು ತಮ್ಮ ಪೀರ್ ಗುಂಪುಗಳಲ್ಲಿ ಮಾತನಾಡಿಕೊಳ್ಳುವುದನ್ನು ನಾವು ಪ್ರೋತ್ಸಾಹಿಸಬೇಕು. ಹೀಗೆ ಮಾಡುವುದರಿಂದ ಬಾಲಕಿಯರಲ್ಲಿ ಒಂದು ಪ್ರಜ್ಞಾವಂತಿಕೆಯನ್ನು ನಾವು ಬೆಳೆಸಬಹುದಾಗಿದೆ.

ಈ ಮೇಲ್ಕಂಡ ವಿಧಾನಗಳು ಚಿಕ್ಕ ಮಕ್ಕಳಲ್ಲಿ ಮುಗ್ಧ ಬಾಲ್ಯವನ್ನು ಕಸಿದುಕೊಂಡು, ಲಿಂಗ ತಾರತಮ್ಯದ ಬಗ್ಗೆ ಆಗಲೇ ಒಂದು ಮನೋಭಾವ ಹುಟ್ಟು ಹಾಕಿ, ಅವರು ಬಾಲ್ಯವನ್ನು ಕಸಿದುಕೊಂಡು ಬಿಡಬಹುದಲ್ಲವೇ ಎಂಬ ಪ್ರಶ್ನೆ ಉದ್ಭವಿಸಬಹುದು. ಬೆಳೆಯುವ ವಯಸ್ಸಿನಲ್ಲಿಯೇ ಒಂದು ಪ್ರಾಕ್ಟಿಕ ದೃಷ್ಟಿಕೋನವನ್ನು ಅವರಲ್ಲಿ ಹುಟ್ಟು ಹಾಕುವುದಿಲ್ಲವೇ ಎಂಬ ಪ್ರಶ್ನೆಗಳು ಉದ್ಭವಿಸಬಹುದು ಆದರೆ ಇಂದು ಬಾಲಕಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಕ್ರೌರ್ಯ, ಹಿಂಸೆಗಳು ಸಾವಲ್ಲಿ ಕೊನೆಗೊಳ್ಳುತ್ತಿರುವುದನ್ನು ಗಮನಿಸಿದಾಗ ಈ ಬಗ್ಗೆ ಬಾಲಕಿಯರನ್ನು ಪ್ರಜ್ಞಾವಂತರನ್ನಾಗಿಸುವುದು ಅನಿವಾರ್ಯದ ಅವಶ್ಯಕತೆಯಾಗಿದೆ.

"ನೇಪಾಳದ ಹೆಣ್ಣು ಮಕ್ಕಳಿಗೆ ಭಾರತ ಪರಿಹಾರ ನೀಡಬೇಕು"

ಅನುರಾಧ ಕೊಯಿರಾಲ

ದುರ್ಗಾ ನೇಪಾಳದ ಹುಡುಗಿ. ದುರ್ಗಾಳ ಕಣ್ಣುಗಳು ಹೊಸ ಆಸೆಯಿಂದ ಮಿನುಗುತ್ತಿದ್ದವು. ಅವಳ ಹೃದಯ ಹೊಸ ಆಸೆಯಿಂದ ಡವಗುಡುತ್ತಿತ್ತು. ಆಕೆಯದು ಒಂದೇ ಕನಸು. ತನ್ನದಾದ ಒಂದು ಜಾಗವನ್ನು ಪಡೆಯುವುದು. ಅವಳ ನೋವು, ಹತಾಷೆಗಳೆಲ್ಲಾ ಅವಳು ಕಂಡ ಕನಸಿನಿಂದಾಗಿ ಮರೆತು ಹೋಗಿದ್ದವು. ಆ ಕನಸು ದುಬೈಗೆ ಹೋಗುವುದು. ಈ ಕನಸನ್ನು ನನಸು ಮಾಡಿಕೊಳ್ಳಲು ಆಕೆ ಏನು ಮಾಡಲೂ ಸಿದ್ದಳಾಗಿದ್ದಳು. ಅವಳಿಗೆ ಹದಿನೈದು ಸಾವಿರ ರೂ ಬೇಕಾಗಿತ್ತು. ಅದಕ್ಕಾಗಿ ಆಕೆ ಹಗಲು ರಾತ್ರಿ ದುಡಿದು ಹದಿನೈದು ಸಾವಿರ ರೂ.ಗಳನ್ನು ಹೊಂದಿಸಿ ಕೊಂಡಿದ್ದಳು. ವೀಸಾ ಪಡೆಯಲು ಏಜೆಂಟನೊಬ್ಬನ ನೆರವಿನಿಂದ ಗಡಿಯನ್ನು ದಾಟಿ ಬಂದಳು. ಆದರೆ ಆಕೆಯ ಕನಸುಗಳೆಲ್ಲಾ ನೆಲಕ್ಕೆ ಬಿದ್ದ ಕನ್ನಡಿಯಂತೆ ಚೂರು ಚೂರಾಗಿ ಹೋದವು.

ನೇಪಾಳದಿಂದ ಕರೆತಂದ ಏಜೆಂಟ್ ಆಕೆಯನ್ನು ದೆಹಲಿಯಲ್ಲಿ ಗೃಹಬಂಧನದಲ್ಲಿರಿಸಿದ್ದ. ವೀಸಾ ಕೊಡಿಸುತ್ತೇನೆಂಬ ಭರವಸೆಯನ್ನು ಆತ ನೀಡುತ್ತಲೇ ಬಂದ. ಆಕೆಗೆ ಹತಾಷೆಯಿಂದ ಉಸಿರು ಕಟ್ಟಿದಂತಾಯಿತು. ದಿನಗಳು ಉರುಳತೊಡಗಿದವು. ಆತ ಬೇರೆಯವರೊಡನೆ ನಡೆಸುತ್ತಿದ್ದ ಸಂಭಾಷಣೆಯಿಂದ ಆಕೆ ನೆಲಕ್ಕೆ ಕುಸಿಯ ತೊಡಗಿದಳು. ಆತ ಆಕೆಯನ್ನು ಬೇರೆಯವರಿಗೆ ಮಾರುವ ಯೋಜನೆಯನ್ನು ಹಾಕಿಕೊಂಡಿದ್ದ ಅಥವಾ ವೀಸಾ ಸಿಗುವವರೆಗೆ ತನ್ನ ಗಿರಾಕಿಗಳೊಂದಿಗೆ ಈಕೆ ಮಲಗುವಂತೆ ಒತ್ತಾ ಯಿಸುವ ಆಲೋಚನೆಯಲ್ಲಿದ್ದ. ಪೋಲೀಸರಿಗೆ ಇವನ ವ್ಯವಹಾರದ ಬಗ್ಗೆ ಅನುಮಾನ ಬಂದು ಅವನಿದ್ದ ಜಾಗವನ್ನು ರೈಡ್ ಮಾಡಿದರು. ಮೊದಲ ಬಾರಿಗೆ ನೇಪಾಳಿ ಹೆಣ್ಣು ಮಕ್ಕಳನ್ನು ದುಬೈ ಆಸೆ ತೋರಿಸಿ ಭಾರತಕ್ಕೆ ಕರೆತರುವ ಜಾಲದ ಬಗ್ಗೆ ಪೋಲೀಸರಿಗೆ ಮಾಹಿತಿ ದೊರೆಯ ತೊಡಗಿದವು.

ನೇಪಾಳದಲ್ಲಿನ ಹೆಣ್ಣು ಮಕ್ಕಳನ್ನು ದುಬೈನಲ್ಲಿ ಕೆಲಸ ಕೊಡಿಸುತ್ತೇನೆಂದು ಭರವಸೆ ನೀಡಿ, ವೀಸಾ ಪಡೆಯಲು ಭಾರತಕ್ಕೆ ಕರೆದುಕೊಂಡು ಬಂದು ಅವರನ್ನು ಮಾರಟಮಾಡುವ ಧಂದೆ ಭಾರತದ ಏಜೆಂಟರ ನೆರವಿನಿಂದ ವ್ಯವಸ್ಥಿತವಾಗಿ 1998 ರಿಂದ ನಡೆಯುತ್ತಿದೆ. ಕೇರಳದ ವ್ಯಕ್ತಿಯೊಬ್ಬ ನೇಪಾಳದವರ ಜೊತೆಗೆ ಪಾರ್ಟನರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಗಲ್ಫ್‌ನಲ್ಲಿ ಕೆಲಸ ಕೊಡಿಸುವುದಾಗಿ ಜಾಹೀರಾತು ನೀಡಿದ. 25,000/- ರೂಗಳನ್ನು ನೀಡಲು ತಯಾರಾಗಿರುವವರಿಗೆ ಕೆಲಸ ಕೊಡಿಸುವ ಭರವಸೆಯನ್ನು ಜಾಹಿರಾತಿನಲ್ಲಿ ನೀಡಲಾಗಿತ್ತು. ಈ ಜಾಹಿರಾತಿಗೆ ಬಂದ ಅರ್ಜಿಗಳಲ್ಲಿ 130 ಜನ ಚಿಕ್ಕ ವಯಸ್ಸಿನವರಾಗಿದ್ದರು. ಪಾಸ್‌ಪೋರ್ಟ್ ಹಾಗೂ ವೀಸಾ, ದೊರಕುತ್ತಿದ್ದ ಹಾಗೆ ಅವರನ್ನು ಭಾರತಕ್ಕೆ ಕರೆ ತರುವಂತೆ ಸೂಚನೆ ನೀಡುತ್ತಿದ್ದ.

ಹೆಚ್ಚು ವೇತನಕ್ಕೆ ಮನೆಗೆಲಸ ದೊರೆಯುತ್ತದೆಂಬ ಕಾತರದಿಂದ ಬಂದ ಹೆಣ್ಣು ಮಕ್ಕಳು ಸಾಮಾನ್ಯವಾಗಿ ಕೆಂಪು ದೀಪದ ಪ್ರದೇಶಗಳಿಗೆ ರವಾನೆಯಾಗುತ್ತಿದ್ದರು. ಮನೆಗೆಲಸದ ನೆಪದಲ್ಲಿ ಲೈಂಗಿಕ ಶೋಷಣೆಯನ್ನು ಎದುರಿಸ ಬೇಕಾಗುತ್ತಿತ್ತು.

ದುರ್ಗಾ ಈ ವಿಚಾರದಲ್ಲಿ ಅದೃಷ್ಟವಂತಳು. ಆಕೆ ದೆಹಲಿಯಲ್ಲಿರುವ ವಿಚಾರ ಅವಳ ತಂದೆಗೆ ತಿಳಿಯಿತು. ನೇಪಾಳದ ಸ್ವಯಂ ಸೇವಾ ಸಂಸ್ಥೆಯ ನೆರವಿನಿಂದ ದೆಹಲಿಯ ಪೋಲಿಸರನ್ನು ಸಂಪರ್ಕಿಸಿದ ಆತ ದುರ್ಗಾಳನ್ನು ಸುರಕ್ಷಿತವಾಗಿ ವಾಪಸ್ಸು ಕರೆದು ಕೊಂಡು ಹೋಗುವಲ್ಲಿ ಯಶಸ್ವಿಯಾದ.

ಆದರೆ ಕಾನಿ ಶೆರ್ಪಾಳ ಕಥೆಯೇ ಬೇರೆ. ಕುವೈತ್‌ನ ಕುಟುಂಬಕ್ಕೆ ಆಕೆ ಮನೆಕೆಲಸದವಳಾಗಿ ಬಂದಳು. ಆಕೆ ಹಲವಾರು ತಿಂಗಳುಗಳ ಕಾಲ ಆಸ್ಪತ್ರೆಯಲ್ಲಿ ಕಳೆದಳು. ಯಜಮಾನನ ಮಗ ಆಕೆಯ ಮೇಲೆ ಹಲವಾರು ಬಾರಿ ಅತ್ಯಾಚಾರವೆಸೆಗಿದ್ದ. ಆಕೆ ಯಜಮಾನನಿಗೆ ದೂರು ನೀಡಿದಳು. ದೂರು ನೀಡಿದ್ದರ ಪರಿಣಾಮವಾಗಿ ಯಜಮಾನ ಆಕೆಯನ್ನು ಮೂರನೇ ಮಹಡಿಯಿಂದ ದೂಡಿದ. ಆಕೆ ಕೈ ಕಾಲು ಮುರಿದುಕೊಂಡು ಆಸ್ಪತ್ರೆಗೆ ಸೇರಿದ್ದಳು.

ದೆಹಲಿಯ ಮೂಲಕ ಏಜೆಂಟ್‌ನೊಬ್ಬ ಆಕೆಗೆ ಕೆಲಸ ಕೊಡಿಸಿದ್ದ. ಆಕೆ ತನ್ನ ಗಂಡ ಹಾಗೂ ನಾಲ್ಕು ಜನ ಮಕ್ಕಳನ್ನು ಸಾಕಬೇಕಾಗಿತ್ತು. ಕುವೈತ್‌ನಲ್ಲಿನ ಈ ಹಿಂಸೆಯಿಂದಾಗಿ ಆಕೆ ವಾಪಸ್ಸು ನೇಪಾಳಕ್ಕೆ ಹೋಗುವ ಪ್ರಯತ್ನ ಮಾಡಿದಳು. ಇದಕ್ಕಾಗಿ ನೇಪಾಳದ ಪೋಲಿಸರ ನೆರವನ್ನು ಕೋರಿದಳು. ಆದರೆ ಈ ವ್ಯವಸ್ಥೆಯನ್ನು ಮಾಡುವ ಮೊದಲೇ ಆಕೆ ತೀರಿಕೊಂಡಳು. ಇದು ಕೇವಲ ಕಾನಿಯೊಬ್ಬಳ ಕಥೆಯಲ್ಲ. ನೇಪಾಳಿ ಹೆಣ್ಣು ಮಕ್ಕಳ ಸ್ಥಿತಿ-ಗತಿಯ ಬಗ್ಗೆ ಯಾವ ಸಂಗತಿಗಳು ಯಾರಿಗೂ ತಿಳಿಯುವುದಿಲ್ಲ. ಏಕೆಂದರೆ ನೇಪಾಳಿ ರಾಯಭಾರಿ ಕಛೇರಿ ಸಹ ಅಲ್ಲಿ ಇಲ್ಲ.

ಹರೆಯದ ಹೆಣ್ಣು ಮಕ್ಕಳಿಗಾಗಿ ಬಲೆ ಬೀಸಲು ವ್ಯವಸ್ಥಿತವಾದ ಸಂಚು ರೂಪಿಸಲಾಗುತ್ತದೆ. ಏಜೆಂಟ್‌ಗಳು ಸಾಮಾನ್ಯವಾಗಿ

ಹೆಂಗಸರನ್ನು ಸಬ್ ಏಜೆಂಟ್‌ಗಳಾಗಿ ನಿಯಮಿಸಿಕೊಳ್ಳುತ್ತಾರೆ. ಬಡತನದ ಬೇಗೆಯಲ್ಲಿ ಬೇಯುತ್ತಿರುವ ಹೆಣ್ಣುಮಕ್ಕಳನ್ನು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ನೇಪಾಳ ಬಿಡುವಂತೆ ಒತ್ತಾಯಿಸುತ್ತಾರೆ.ಹೀಗೆ ನಂಬಿ ನೇಪಾಳ ಬಿಟ್ಟವರಲ್ಲಿ ಕಮಲಾಳೂ ಒಬ್ಬಳು. ಆಕೆ ಎಂಟು ತಿಂಗಳ ಕಾಲ ಲೈಂಗಿಕ ಶೋಷಣೆಗೆ ಒಳಗಾಗಿದ್ದಳು. ಮಾನಸಿಕವಾಗಿಯೂ ಆಕೆಯನ್ನು ಹಿಂಸಿಸಿದರು. 1997ರಲ್ಲಿ ಆಕೆ ಭಾರತಕ್ಕೆ ವಾಪಸ್ಸು ಬಂದಳು. ಭಾರತಕ್ಕೆ ಬರುವ ಮೊದಲು ಬಾಂಗ್ಲಾ ದೇಶದಲ್ಲಿ ಗರ್ಭಪಾತ ಮಾಡಿಸಿಕೊಳ್ಳಬೇಕಾಯಿತು. ಈ ಪ್ರಕರಣ ಸಾರ್ವಜನಿಕರ ಗಮನವನ್ನು ಸೆಳೆಯಿತು. ಮಹಿಳಾ ಸಂಘಟನೆಗಳು ಸಾಕಷ್ಟು ಕೂಗೆಬ್ಬಿಸಿದವು. ಈ ಕಾರಣದಿಂದಾಗಿ 35 ವರ್ಷಕ್ಕಿಂತ ಚಿಕ್ಕವರು ಉದ್ಯೋಗಕ್ಕಾಗಿ ಗಲ್ಫ್ ದೇಶಗಳಿಗೆ ಹೋಗುವುದನ್ನು ನಿಷೇಧಿಸಲಾಯಿತು. ಆದರೂ ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳನ್ನು ಆಕರ್ಷಿಸಿ ಕರೆದೊಯ್ಯಲಾಗುತ್ತಿದೆ.

19 ವರ್ಷ ವಯಸ್ಸಿನ. ಸಾನಾಳ ಅನುಭವ ಹೃದಯವಿದ್ರಾವಕವಾಗಿದೆ. ಕುವೈಟ್‌ನಲ್ಲಿ ಕೆಲಸ ಕೊಡಿಸುವುದಾಗಿ ಭರವಸೆ ನೀಡಿ ಏಜೆಂಟನೊಬ್ಬ ಆಕೆಯನ್ನು ಕರೆದೊಯ್ದ ಆಕೆಯ ಜೀವನ ನರಕವಾಗಿತ್ತು. ಆಕೆಯನ್ನು ಒಂದು ಕೋಣೆಯಲ್ಲಿ ಕೂಡಿ ಹಾಕಲಾಗಿತ್ತು. ಆತನ ಸ್ನೇಹಿತರೊಂದಿಗೆ ಮಲಗುವಂತೆ ಒತ್ತಾಯಿಸಲಾಗುತ್ತಿತ್ತು . ಅನೇಕ ಬಾರಿ ಆಕೆ ಒಂದು ದಿನದಲ್ಲಿ 20 ಜನರೊಡನೆ ಮಲಗಿದ ಸಂದರ್ಭವೂ ಇದೆ. ಆಕೆ ಇದನ್ನು ಅತಿ ಮಾಡಿ ಹೇಳುತ್ತಿಲ್ಲ.ಈ ವಿಷಯವನ್ನು ಮುಚ್ಚಿಡದೇ ಹೇಳಲು ಕಾರಣವೇಂದರೆ, ಇದು ನನ್ನ ಸಹೋದರಿಯರಿಗೆ ತಿಳಿಯಲಿ. ಅವರು ಇಂತಹ ಕಹಿ ಅನುಭವಕ್ಕೆ ತುತ್ತಾಗುವುದು ಬೇಡ" ಎನ್ನುತ್ತಾಳೆ.

ನೇಪಾಳದ ಪೋಲಿಸರು ಭಾರತ ಗಡಿಯನ್ನು ಎಚ್ಚರಿಕೆಯಿಂದ ಕಾಯುತ್ತಾರೆ. ಕೆಲವು ಹೆಣ್ಣು ಮಕ್ಕಳು ಭಾರತದ ಗಡಿಯನ್ನು ರಸ್ತೆಯ ಮೂಲಕ ನಡೆದು ದಾಟಿ, ಏಜೆಂಟರಿರುವ ಬಸ್‌ನ್ನು ಹತ್ತುತ್ತಾರೆ. ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ವಾಪಸ್ಸು ಕಳಿಸಿದ ನಿದರ್ಶನಗಳು ಸಾಕಷ್ಟಿವೆ.

ನೇಪಾಳದ ಹಳ್ಳಿಗಳು ಹಾಗೂ ಭಾರತದ ನಡುವೆ ನಡೆಯುತ್ತಿರುವ ವೇಶ್ಯಾವಾಟಿಕೆಯ ಜಾಲಗಳಿಗೆ 'ಅನುರಾಧ ಕೊಯಿರಾಲ' ಹೆಸರು ದುಃಸ್ವಪ್ನ, ರಾಜಕೀಯ ವ್ಯಕ್ತಿಗಳಿಂದ ಹಿಡಿದು ಈ ಮಾಫಿಯಾ ಗ್ಯಾಂಗ್‌ನಲ್ಲಿರುವ ಪ್ರತಿಯೊಬ್ಬರು ಈಕೆಗೆ ಹೆದರುತ್ತಾರೆ. ಖ್ಯಾತ ರಾಜಕಾರಣಿಯೊಬ್ಬ, ಈ ವ್ಯವಹಾರದಲ್ಲಿ ಸಿಲುಕಿ ಕೊಂಡಿದ್ದ. ಅನುರಾಧ ಈ ವಿಷಯ ಕುರಿತು ಚರ್ಚೆ ಮಾಡಲು ಅವನನ್ನು ಕಛೇರಿಗೆ ಆಹ್ವಾನಿಸಿದಳು. ಆತ ಕಛೇರಿಗೆ ಬಂದು, ಹುಡುಗಿಯು ಬೇರೆಯಾರು ಅಲ್ಲ ಅವನ ಎರಡನೆಯ ಹೆಂಡತಿ ಎಂದು ಹೇಳಿದ. ಈತನ ಹೇಳಿಕೆಯನ್ನು ಹಾಗೂ ಘನತೆಯನ್ನು ಅನುರಾಧ ವರದಿಗಾರ್ತಿಯೊಬ್ಬರ ನೆರವಿನಿಂದ ಚಿತ್ರೀಕರಿಸಿದ್ದಳು. ಆತ ಮಾನ ನಷ್ಟ ಮೊಕದ್ದಮೆ ಹಾಕುವುದಾಗಿ ಹೆದರಿಸಿದ. ಆದರೆ ಆತ ನ್ಯಾಯಾಲಯದ ಮೆಟ್ಟಲನ್ನು ತುಳಿಯಲಿಲ್ಲ.

ವೇಶ್ಯಾವಾಟಿಕೆಯಿಂದ ವಾಪಸ್ಸು ಬಂದ , ಏಯ್ಡ್ಸ್‌ರೋಗದಿಂದ ನರಳುವ, ಅನಾಥಮಕ್ಕಳಿಗಾಗಿ ಈಕೆ, 'ಮೆಯಿಥಿ' ಕೇಂದ್ರವನ್ನು ನಡೆಸುತ್ತಿದ್ದಾಳೆ. 'ಮೆಯಿಥಿ' ಎಂದರೆ ಕುಟುಂಬ ಎಂದರ್ಥ. ಇಲ್ಲಿರುವ ಬಹುಪಾಲು ಹೆಣ್ಣು ಮಕ್ಕಳು, ಬಾಂಬೆ, ಕಲಕತ್ತಾ ಹಾಗೂ ಭಾರತದ ಇತರ ಕೆಂಪು ದೀಪದಿಂದ ವಾಪಸ್ಸು ಬಂದವರು. ಕೆಲವರು ತಪ್ಪಿಸಿಕೊಂಡು ಬಂದಿದ್ದರೆ, ಕೆಲವರು ಪೋಲಿಸರ ನೆರವಿನಿಂದ ಬಂದವರು.

ಅನುರಾಧ ಶಿಕ್ಷಕಿಯಾಗಿದ್ದರು. 1993 ರಲ್ಲಿ ತಮ್ಮ ಶಿಕ್ಷಕ ವೃತ್ತಿಗೆ ವಿದಾಯ ಹೇಳಿ ಸಂಸ್ಥೆಯನ್ನು ಸ್ಥಾಪಿಸಿದರು. ಹಳ್ಳಿಗಳಲ್ಲಿ ಮುಗ್ಧರಾದ ಹೆಣ್ಣುಮಕ್ಕಳನ್ನು ಪಟ್ಟಣಗಳಲ್ಲಿ ಕೆಲಸ ಕೊಡಿಸುವ ನೆಪದಲ್ಲಿ ವೇಶ್ಯಾವಾಟಿಕೆಗೆ ತಳ್ಳುತ್ತಾರೆಂದು. ಸಂಸ್ಥೆಯ ಸ್ವಯಂ ಸೇವಕರು ಹಳ್ಳಿಹಳ್ಳಿಯಲ್ಲಿ ಈ ಮಾಫಿಯಾದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

"ಆ ದೇಶದ ಜನಗಳು ನಮ್ಮ ಹೆಣ್ಣು ಮಕ್ಕಳನ್ನು ಉಪಯೋಗಿಸಿಕೊಂಡು, ಮಜಾಮಾಡಿ ಅವರನ್ನು ಹೆಣಗಳಾಗಿ ನಮ್ಮ ದೇಶಕ್ಕೆ (ನೇಪಾಳ)ವಾಪಸ್ಸು ಕಳಿಸಿದ್ದಾರೆ. ಹಾಗಾಗಿ ಭಾರತದ ವೇಶ್ಯಾವಾಟಿಕೆಯಿಂದ ಹಿಂತಿರುಗಿ ಬರುವ ಪ್ರತಿಯೊಬ್ಬ ಸ್ತ್ರೀಗೂ ಭಾರತ ದೇಶ ಪರಿಹಾರ ನೀಡಬೇಕು ಎಂದು ಅನುರಾಧ ಹೇಳುತ್ತಾರೆ.

ನೇಪಾಳದ ರಾಜಕೀಯ ಅಸ್ಥಿರತೆಯಿಂದ ನರಳುತ್ತಿದೆ. ರಾಜಪ್ರಭುತ್ವ - ಪ್ರಜಾಪ್ರಭುತ್ವದ ನಡುವಿನ ಘರ್ಷಣೆ ನಿರಂತರವಾಗಿ ನಡೆಯುತ್ತದೆ. ಈ ಹೋರಾಟ ಕೇವಲ ಅಧಿಕಾರದ ಪ್ರತಿಷ್ಠಾಪನೆಗಾಗಿ ಎನ್ನುವುದು ಕಣ್ಣಿಗೆ ರಾಚುವ ಸತ್ಯವಾಗಿದೆ. ಪ್ರಜಾಪ್ರಭುತ್ವ ಸಹ ಕೇವಲ ಓಟಿನ ಮೂಲಕ ವ್ಯಕ್ತವಾಗುವ ನೆಪಮಾತ್ರದ ರಾಜಕೀಯ ವ್ಯವಸ್ಥೆಯಾಗಿದೆ. ನಿಜವಾದ ಪ್ರಜಾಪ್ರಭುತ್ವ ಎಂದರೆ ಜನಸಾಮಾನ್ಯರ ದನಿಯನ್ನು ಪ್ರತಿನಿಧಿಸುವ ವ್ಯವಸ್ಥೆ . ಇಂತಹ ವ್ಯವಸ್ಥೆಯಲ್ಲಿ ಅನುರಾಧಾ ಕೊಯಿರಾಲ ರಂತಹವರು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಅಂತಹ ಪ್ರಜಾಪ್ರಭುತ್ವ ಸಾಧ್ಯವೆ ?

ನೇಪಾಳದ ಹದಿಹರೆಯದ ಹೆಣ್ಣು ಮಕ್ಕಳನ್ನು ಭಾರತದ ವೇಶ್ಯಾವಾಟಿಕೆಗೆ ಮಾರಲಾಗುತ್ತದೆ.

ನೇಪಾಳದ ಹೆಣ್ಣು ಮಕ್ಕಳ ಈ ಸ್ಥಿತಿಗೆ ದೇಶದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯೂ ಕಾರಣವಾಗಿದೆ.

ಅಲ್ಲಿನ ಗ್ರಾಮಗಳು ವಿದ್ಯುಚ್ಛಕ್ತಿ, ನೀರಿನ ಕೊರತೆಯಿಂದ ನರಳುತ್ತಿವೆ. ಆರೋಗ್ಯದ ಕಡೆ ಗಮನವಿಲ್ಲ. ಆಹಾರದ ಕೊರತೆಯು ಸಾಕಷ್ಟಿದೆ. ನೀರಾವರಿಯ ಕೊರತೆಯಿಂದಾಗಿ, ಆಲೂಗಡ್ಡೆ ಹಾಗೂ ಜೋಳವನ್ನು ಬೆಳೆಯಲು ಆಗುತ್ತಿಲ್ಲ. ಹೆಣ್ಣುಮಕ್ಕಳ ಸಂಖ್ಯೆ 100 ಇದ್ದರೆ ಪುರುಷರ ಸಂಖ್ಯೆ 99.47 ಸಾಕ್ಷರತೆಯ ಪ್ರಮಾಣ ಕೇವಲ 25%. ಬಹುಪಾಲು ಕೆಲಸವನ್ನು ಹೆಂಗಸರು ಮಾಡುತ್ತಾರೆ. ಬಡತನದ ಬೇಗೆಯನ್ನು ತಡೆಯಲು ಸಾಧ್ಯವಾಗದಾಗ, 'ಹಣ ಗಳಿಸಲು' ಹೆಣ್ಣು ಮಕ್ಕಳನ್ನು ಭಾರತಕ್ಕೆ ಕಳಿಸಲಾಗುತ್ತದೆ.

ಒಂದು ಹಳ್ಳಿಯಲ್ಲಿ ಈ ಧಂದೆಗೆ ನೆರವಾಗುವ ಒಬ್ಬ ದಾದ ಇರುತ್ತಾನೆ. ಇವನ ನೆರವಿನಿಂದ ಹೆಣ್ಣುಮಕ್ಕಳನ್ನು ಈ ಧಂದೆಗೆ ಮಾರಟಮಾಡುತ್ತಾರೆ. ಇದನ್ನು ಮುಕ್ತವಾಗಿ ಯಾರೊಂದಿಗೂ ಹೇಳುವುದಿಲ್ಲ ಈ ದಾದ ಹೆಣ್ಣುಮಕ್ಕಳಿಂದ ಹಣಪಡೆಯಲು ಹಲವಾರು ಬಾರಿ ಮುಂಬೈಗೆ ಬರುತ್ತಾನೆ. ಅವರು ಏನು ಕೆಲಸ ಮಾಡುತ್ತಾರೆಂಬುದನ್ನು ಯಾರಿಗೂ ಹೇಳುವುದಿಲ್ಲ. ಈ ರೀತಿ ಸುಮಾರು 2000 ಕುಟುಂಬಗಳು ತಮ್ಮ ಹೆಣ್ಣು ಮಕ್ಕಳನ್ನೂ ಮಾರಾಟ ಮಾಡಿರುತ್ತಾರೆ. ಈ ವಿಷಯವನ್ನು ಯಾರಿಗೂ ಬಹಿರಂಗ ಪಡಿಸುವುದಿಲ್ಲ . ಒಂದು ಪಕ್ಷ ಬಹಿರಂಗ ಪಡಿಸಿದರೆ, ಪಿಂಪ್‌ಗಳು ಕೊಲೆ ಮಾಡಿ ಬಿಡುತ್ತಾರೆ. ವಿಷಯ ಗೊತ್ತಾಗದ ರೀತಿಯಲ್ಲಿ ಲಂಚವನ್ನು ನೀಡುತ್ತಾರೆ.

ಕೆಲವರು ಇಷ್ಟಪಟ್ಟು ಬರುತ್ತಾರೆ. ಆದರೆ ಬಹುಪಾಲು ಹೆಣ್ಣು ಮಕ್ಕಳು ಕುಟುಂಬದ ಒತ್ತಾಯಕ್ಕೆ ವೇಶ್ಯೆಯರಾಗುತ್ತಾರೆ. ಒಮ್ಮೆ ಬಂದ ಮೇಲೆ ಪುನಃ ವಾಪಸ್ಸು ಹೋಗುವುದು ಅಪರೂಪ. ಜೊತೆಗೆ ಬೇರೆ ಬೇರೆ ಹುಡಗಿಯರನ್ನು ಕರೆದುಕೊಂಡು ಬರುತ್ತಾರೆ. ಕುಟುಂಬದ ಆರ್ಥಿಕ ಹೊರೆ ಪುನಃ ಇವರನ್ನು ಈ ಸ್ಥಿತಿಗೆ ತಳ್ಳುತ್ತದೆ.

ಅನುವಾದ : 'ಮಾನಸ'

ಹೀಗೊಂದು ಅಂತರಾಳದ ಮಾತು

(ಲೈಂಗಿಕ ದೌರ್ಜನ್ಯ ಕುರಿತು)

ನಾನು ತುಂಬಾ ಎಳೆಯ ಮಗುವಾಗಿದ್ದೆ. ತನ್ನ ತಂದೆ ನನ್ನ ಹೊದಿಕೆಯ ಒಳಗೆ, ನನ್ನ ಕಾಲುಗಳ ಮಧ್ಯ ತನ್ನ ಕೈ ಬೆರಳುಗಳಿಂದ ಏನು ಮಾಡುತ್ತಿದ್ದ ಎನ್ನುವುದ ಅರ್ಥ ನನಗಾಗುತ್ತಿರಲಿಲ್ಲ. ನನ್ನ ನೆನಪುಗಳು ಅಸ್ಪಷ್ಟವಾಗಿವೆ. ಆದರೆ ಆ ವಯಸ್ಸಿನಲ್ಲಿ ನನ್ನ ತಂದೆ ಮಾಡುತ್ತಿದ್ದುದ್ದು ನೋವುಂಟು ಮಾಡುತ್ತಿತ್ತು. ನಾನು ನಾಲ್ಕು ವರ್ಷದವಳಾಗಿದ್ದೆ. ಈ ನನ್ನ ತಂದೆಯ ಈ ವಿಕೃತ ಚೇಷ್ಟೆ ಮುಂದುವರಿಯುತ್ತಲೇ ಇತ್ತು. ಈ ನೋವಿನ ಅರ್ಥ ನನಗಾಗುತ್ತಿತ್ತು. ಈ ನೋವುವನ್ನು ನನಗೆ ನೀಡುವ ಬದಲು ನನ್ನ ತಂದೆ ನನ್ನನ್ನು ಒಂದೇ ಬಾರಿ ಸಾಯಿಸಬಾರದೇಕೆ ಎಂದು ಯೋಚಿಸುತ್ತಿದ್ದೆ. ಕುಟುಂಬದ ಇತರ ಸದಸ್ಯರೊಂದಿಗೆ ಇರುವಾಗ, ಅಥವಾ ಸಂಬಂಧಿಕರೊಂದಿಗೆ ಇರುವಾಗ, ನನ್ನ ತಂದೆ ಅತ್ಯಂತ ಹೆಮ್ಮೆಯಿಂದ, ಜಂಬದಿಂದ ನಮ್ಮ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ಸಮಾಜದೆದುರು ಹಾಕುತ್ತಿದ್ದ ಮುಖವಾಡದ ಪರಿಚಯ ನನಗಾಗ ತೊಡಗಿತು. ನಮ್ಮ ತಂದೆ ನನಗುಂಟು ಮಾಡಿದ ನೋವನ್ನು ಭೌತಿಕ ಅಮಿಷದಿಂದ ಬದಲಾಯಿಸಲು ನೋಡಿದರು. ನನಗೆ ಬಣ್ಣ ಬಣ್ಣದ ಗೊಂಬೆ. ಆಟದ ಸಾಮಾನುಗಳನ್ನು ನೀಡ ತೊಡಗಿದರು. ಇದಕ್ಕೆ ಸಮಯ ಮೀರಿತ್ತು. ನಾನು ಮುಗ್ಧ ಮನಸ್ಸಿನ ಎಳೆಯ ಮಗುವಾರಿರಲಿಲ್ಲ. ಬೇರೆ ಕುಟುಂಬದ ತಂದೆಯರು ಅವರ ಮಕ್ಕಳ ಜೊತೆ ಹೇಗಿರುತ್ತಾರೆ ಎಂಬುದನ್ನು ನಾನು ಸದಾ ಸೂಕ್ಷ್ಮವಾಗಿ ಗಮನಿಸ ತೊಡಗಿದೆ. ಒಂದರ್ಥದಲ್ಲಿ ನಾನು ಗೂಢಾಚಾರ ಮಾಡತೊಡಗಿದೆ. ಅಲ್ಲಿ ಇದಕ್ಕಿಂತ ಇನ್ನು ಏನೇನೋ ಕಾಣತೊಡಗಿತು. ನನ್ನ ತಂದೆ ನೀಡಿದ ಆಟದ ಸಾಮಾನಿನ ಅಗತ್ಯ ನನಗಿರಲಿಲ್ಲ. ಆಟವಾಡುವುದೆಂದರೆ ನನ್ನ ಅರ್ಥದಲ್ಲಿ 'ವಾಸ್ತವ' ಅಂಶಗಳನ್ನು ಅರ್ಥ ಮಾಡಿಕೊಳ್ಳುವುದು. ಪತ್ರಿಕೆ 'ಓದುವುದು' ಹಾರ್ಮೋನಿಯಂ ನುಡಿಸುವುದು, ನಾನು ದ್ವೇಷಿಸುತ್ತಿದ್ದ ಜನರ ಚಿತ್ರ ಬಿಡಿಸುವುದನ್ನು ನಾನು ಮಾಡುತ್ತಿದ್ದೆ. ನಾನು ಒಂಬತ್ತನೆಯ ವಯಸ್ಸಿನವಳಾಗಿದ್ದಾಗ ಕವಿತೆಗಳನ್ನು ಬರೆಯ ತೊಡಗಿದೆ. ಆಟದ ಸಾಮಾನುಗಳನ್ನು ಬೀದಿಗೆ ಎಸೆಯುತ್ತಿದ್ದೆ. ಗೋಡೆಗಳಿಗೆ ಎಸೆಯುತ್ತಿದೆ. ನನ್ನ ತಂದೆ ನೀಡಿದ ಪ್ರತಿಯೊಂದನ್ನು ನಾನು ನಾಶ ಮಾಡ ಬಯಸುತ್ತಿದ್ದೆ. ಇದರಲ್ಲಿ ನನಗೆ ಸಂತೋಷ ಸಿಗುತ್ತಿತ್ತು. ವಸ್ತುಗಳು ಮತ್ತು ಹಣವನ್ನು ನಾನು ತುಂಬಾ ನಿರ್ಲಿಪ್ತವಾಗಿ ನೋಡತೊಡಗಿದೆ. ಹಣ ಮತ್ತು ಭೌತಿಕ ವಸ್ತುಗಳ ಬಗೆಗಿನ ಗಟ್ಟಿಗೊಂಡ ತಾತ್ವಿಕ ಆಲೋಚನೆ ಇಂದೂ ನನ್ನ ಮನಸ್ಸಿನಲ್ಲಿ ಬೇರು ಬಿಟ್ಟಿವೆ.

ನನಗೆ ಹತ್ತು ವರ್ಷ ವಯಸ್ಸು. ನನ್ನ ಹುಡುಕಾಟದಿಂದ ನಾನು ಹೊಸದಾರಿಗಳನ್ನು ಕಂಡು ಕೊಂಡೆ. ಈ ಪ್ರಪಂಚದಲ್ಲಿ ನನಗೆ ಸೂಕ್ತವಾದ ಹೊಸ ಜಾಗವನ್ನು ಕಂಡುಕೊಂಡೆ. ನನ್ನ ಮನೆಯಿಂದ ದೂರ, ದೂರ ವಾದ ಜಾಗೆ ಉಪಯುಕ್ತ ಸಲಹೆ. ನನ್ನ ತಂದೆ ನನ್ನಲ್ಲಿ ಬಿತ್ತಿದ್ದ ಚಿತ್ರಕ್ಕಿಂತ ವಿಭಿನ್ನವಾದ ಚಿತ್ರ; ನಾನು ನಿದ್ರೆಗಾಗಿ, ಹಾಗೂ ಈ ನರಕದಿಂದ ಪಾರುಮಾಡುವಂತೆ ದೇವರನ್ನು ಬೇಡುತ್ತಿದ್ದೆ. ಹೀಗೆ ಪ್ರಾರ್ಥನೆ ಮಾಡುವುದನ್ನು ಒಮ್ಮೆ ನನ್ನ ತಂದೆ ನೋಡಿದ. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದು ನನಗೆ ಅರ್ಥವಾಗುತ್ತಿದೆ ಯೆಂಬುದು ಆತನಿಗೆ ಅರಿವಾಯಿತು. ಅವನು ಹೆದರಿಸುತ್ತಿದ್ದುದು, ಭಯಪಡಿಸುತ್ತಿದ್ದುದು, ಯಾವುದೂ ಕೆಲಸಕ್ಕೆ ಬರುತ್ತಿರಲಿಲ್ಲ. ನನ್ನ ಅಸ್ತಿತ್ವವೇ ಆತನನ್ನೂ ಹೆದರಿಸುತ್ತಿತ್ತು.

ನನ್ನ ತಂದೆಯ ಬಳಿ ಒಂದು ಬಂದೂಕು ಇತ್ತು. ಅದನ್ನು ಆತ ನನ್ನ ಹಾಗೂ ನನ್ನ ತಂಗಿಯ ತಲೆಯ ಬಳಿ ಹಿಡಿದು ಹೆದರಿಸುತ್ತಿದ್ದ. ಆದರೆ ಇಂತಹ ವಿಕೃತ ವ್ಯಕ್ತಿಗೆ, ಏನು, ಹೇಳಬೇಕು, ಯಾವ ಸಂದರ್ಭದಲ್ಲಿ, ಸಂದರ್ಭಕ್ಕೆ ಆಯ್ಕೆ ಮಾಡಿಕೊಂಡು ಏನು ಹೇಳಬೇಕೆಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಆದರೆ ಆತ ಬಂದೂಕಿನ ಕುದುರೆಯನ್ನು ಯಾವಾಗಲು ಒತ್ತಲಿಲ್ಲ.

ನನ್ನ ತಂದೆ ಬಂದೂಕು ಹಾರಿಸುವುದನ್ನೂ ಕಲಿಸಿದ್ದರು. ನಾನು ಅದರಲ್ಲಿ ಪರಿಣತಿಯನ್ನು ಪಡೆದಿದ್ದೆ. ಅದೇ ಬಂದೂಕಿನಿಂದ ನನ್ನ ತಂದೆಯನ್ನು ಸಾಯಿಸುವ ಬಗ್ಗೆ ನಾನು ಯೋಚಿಸಿದ್ದೆ. ಮಧ್ಯ ರಾತ್ರಿ ಬಂದೂಕಿಗಾಗಿ ಹಾಗೂ ಬುಲೆಟ್ಟಿಗಾಗಿ ಮಹಡಿಯ ಮೇಲೇರಿದ್ದೆ. ತಪ್ಪಿಸಿ ಕೊಂಡು ಓಡಿಹೋಗಲು ನಾನು ಸಂಪೂರ್ಣ ತಯಾರಾಗಿ ಬಂದಿದ್ದೆ. 'ಸಾಧ್ಯವಾದರೆ ನನ್ನ ಹಿಡಿಯಿರಿ'. ನಾನು ಈ ಬಗ್ಗೆ ಸದಾಯೋಚಿಸ ತೊಡಗಿದೆ. 'ಈ ಮನುಷ್ಯನಿಗೆ ಕರುಣೆ ತೋರಿಸುವುದೆ ' ಆದರೆ ನಾನು ಇನ್ನೆಂದು ಬಂದೂಕು ಮುಟ್ಟಲಿಲ್ಲ.

ವಸಂತ ಮಾಸದಲ್ಲಿ ನನ್ನ ತಂಗಿ ಅವಳ ಶಾಲೆಯಿಂದ ನನ್ನ ತಾಯಿಗೆ ಫೋನ್ ಮಾಡಿದಳು, ತಾಯಿಗೆ ಒಂದು ಗುಟ್ಟು ಸಮಾಚಾರ ಹೇಳಬೇಕೆಂತಲೂ, ಅವಳನ್ನು ಕರೆದುಕೊಂಡು ಹೋಗುವಂತೆ ತಿಳಿಸಿದ್ದಳು. ಆ ವಿಷಯವನ್ನು ಇನ್ನು ತಾನು ಮನಸ್ಸಿನಲ್ಲಿ ಇಟ್ಟು ಕೊಳ್ಳಲಾರಳೆಂದು ಹೇಳಿದ್ದಳು. ಹೀಗೆ ನನ್ನ ತಂಗಿ ಮಾಡಿದ್ದರ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ. ನಾನು ನಾಲ್ಕು ವರ್ಷದವಳಾದಾಗಿನಿಂದ, ನನ್ನ ತಾಯಿ ಮಾನಸಿಕ ಆಸ್ಪತ್ರೆಗೆ ಹೋಗುತ್ತಿದ್ದರು. ತನ್ನ ಹೆಣ್ಣು ಮಕ್ಕಳಿಗೆ ಏನಾಗುತ್ತಿತ್ತು ಎಂಬುದರ ಅರಿವು ನಮ್ಮ ತಾಯಿಗಿರಲಿಲ್ಲ. ನನ್ನ ತಂಗಿ, ನನ್ನ ತಂದೆ ಅವಳಿಗೆ ಮಾಡುತ್ತಿದ್ದುದನ್ನೆಲ್ಲಾ ಹೇಳಿದಳು. ನನ್ನ ತಾಯಿ ಒಂದು ಸರಳವಾದ ಪ್ರಶ್ನೆಯನ್ನು ಕೇಳಿದಳು"ನೀನು ಹೇಗಿದೀಯಾ"? ನಮ್ಮ ತಾಯಿ ನಮ್ಮ ಬಗ್ಗೆ ತುಂಬಾ ಅಕ್ಕರೆಯನ್ನು ತೋರಿಸುತ್ತಿದ್ದಳು. ಅವಳಿಗೆ ನಮ್ಮ ಮೇಲೆ ನಂಬಿಕೆ ಇತ್ತು. ತುಂಬಾ ಅಪರೂಪವಾಗಿ ಆಕೆ ನಮ್ಮನ್ನು ಬೈಯುತ್ತಿದ್ದಳು. ಆಕೆ ತುಂಬಾ ಸೂಕ್ಷ್ಮವಾಗಿದ್ದಳು. ಆಕೆ ಮಗುವಿನಂತಹ ಮನಸ್ಸಿನವಳು. ಆಕೆಗೆ ಹೇಳಲು ನಾನು ಹೆದರಿದ್ದೆ. ಅವಳು ಹೇಗೆ ಪ್ರತಿಕ್ರಿಯೆ ತೋರಿಸುತ್ತಿದ್ದಳು ? ಆತ ಏನು ಹೇಳುತ್ತಿದ್ದ ದೇವರಿಗೆ ಗೊತ್ತು ! ಆತ ಯಾವಾಗಲು ಜೀವ ಬೆದರಿಕೆಯನ್ನು ಹಾಕುತ್ತಿದ್ದ.

ನನ್ನ ತಂದೆ ಹಲವಾರು ರೀತಿಯಲ್ಲಿ ತನ್ನ ಚಾಲಾಕಿತನವನ್ನು ತೋರಿಸುತ್ತಿದ್ದ. ಊಟಕ್ಕೆ ಕುಳಿತಾಗಲೆಲ್ಲಾ ಪ್ರತಿ ರಾತ್ರಿ ನನ್ನ ತಂಗಿಯನ್ನು ಹಂಗಿಸುತ್ತಿದ್ದ, ಆಕೆಯನ್ನು ಮೂಗಿ, ಬುದ್ಧಿ ಇಲ್ಲದವಳು, ಕುರೂಪಿ ಎಂದು ಹಂಗಿಸುತ್ತಾ ಕಣ್ಣೀರು ಹಾಕಿಸುತ್ತಿದ್ದ. ನಂತರ ನನ್ನ ಕಡೆ ನೋಡಿ, ನಿನಗಿಂತ ಇವಳು ಜಾಣೆ, ಬುದ್ಧಿವಂತೆ ಎಂದು ಹೊಗಳುತ್ತಿದ್ದ. ಅವಳನ್ನು ದ್ವೇಷಿಸುವಂತೆ ಮಾಡಿದ. ಅದು ಅವಳ ತಪ್ಪಲ್ಲ. ಅವನು ನಮ್ಮನ್ನು ಯಶಸ್ವಿಯಾಗಿ ಬೇರ್ಪಡಿಸಿದ್ದ. ನಮ್ಮಿಬ್ಬರಿಗೂ ಆತ ಲೈಂಗಿಕ ಕಿರುಕುಳ ನೀಡುತ್ತಿದ್ದರೂ ನಮ್ಮಿಬ್ಬರಿಗೂ ಅವನ ಈ ವಿಕೃತ ಕಾರ್ಯದ ಅನುಭವ ಆಗಿದ್ದರೂ, ಇಬ್ಬರಿಗೂ ಅದರ ಬಗ್ಗೆ ಅರಿವು ಮೂಡದಂತೆ ನೋಡಿಕೊಂಡಿದ್ದ. ನಾವಿಬ್ಬರು ಜೊತೆಗೆ ಬೆಳೆದೆವು. ಒಂದೇ ಸೂರಿನಡಿ ಬೆಳೆದೆವು ಇಬ್ಬರು ಜೊತೆಯಾಗಿ ನಕ್ಕವು. ಜೊತೆಯಾಗಿ ಆಡಿದೆವು. ಒಂದೇ ವಸ್ತುವಿಗಾಗಿ ನಾವಿಬ್ಬರು ಕಿತ್ತಾಡಿದ್ದೇವೆ. ಆದರೆ ಈ ವಿಷಯವನ್ನೂ ಕುರಿತು ಮಾತನಾಡಲು ನಾವಿಬ್ಬರೂ ಆಪ್ತರಾಗಲೇ ಇಲ್ಲ. ನಾವಿಬ್ಬರೂ ಸಹೋದರಿಯರಾಗಿದ್ದೆವು. ಆದರೆ ನಮ್ಮ ತಂದೆ ನಮ್ಮ ನಡುವೆ 'ಅಸಮಾನತೆ' ಯ ಬೀಜ ಬಿತ್ತಿದ್ದರು. ಅಂತಿಮವಾಗಿ ನಮ್ಮ ತಂದೆ-ತಾಯಿ ವಿಚ್ಛೇದನ ಪಡೆದರು.

"ಲೈಂಗಿಕ ಶಿಕ್ಷಣದ ಅಗತ್ಯ"

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಸಾಮಾನ್ಯವಾಗಿ ನಡೆಯುವುದು ತೀರಾ ಪರಿಚಿತರಿಂದ ಅಣ್ಣ, ತಮ್ಮ , ಹತ್ತಿರದ ಸಂಬಂಧಿಕರು, ಪಕ್ಕದ ಮನೆಯುವರು, ಇವರಿಂದಲೇ ಸಾಮಾನ್ಯವಾಗಿ ಮಕ್ಕಳ ಮೇಲೆ ಈ ದೌರ್ಜನ್ಯ ನಡೆಯುತ್ತದೆ.

ಎಳೆಯ ಮಕ್ಕಳನ್ನು ಗಂಡು ಮಕ್ಕಳೂ ಹುಡುಗರು, ಎತ್ತಿ ಮುದ್ದಾಡೋದನ್ನು ಮಕ್ಕಳ ಮೇಲಿನ ಪ್ರೀತಿಯಿಂದ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಹೀಗೆ ಎತ್ತಿ ಮುದ್ದಾಡುವಾಗ ಮರೆಯಲ್ಲಿ ಹೆಣ್ಣು ಮಕ್ಕಳ ಒಳ ಉಡುಪನ್ನೂ ತೆಗೆದು ಹಿಂಸಿಸುತ್ತಾರೆ. ಮನೆಯಲ್ಲಿ ವಯಸ್ಸಾದ ಗಂಡಸರು ಸಹ ಮಕ್ಕಳ ಮೇಲೆ ಇಂತಹ ದೌರ್ಜನ್ಯವನ್ನು ಮಾಡುತ್ತಾರೆ. ಇದು ಕುಟುಂಬದಲ್ಲಿ ಮಾತ್ರ ನಡೆಯುವುದಿಲ್ಲ, ಶಾಲೆಗೆ ಹೋಗುವ ಮಕ್ಕಳ ಮೇಲೆ ಸಹಪಾಠಿಗಳು, ಉಪಾಧ್ಯಾಯರು ಸಹ ಇಂತಹ

ಕ್ರೌರ್ಯವನ್ನು ಎಸಗುತ್ತಾರೆ. ವಿದ್ಯಾರ್ಥಿನಿಯರಿಗೆ ಇಂತಹ ಕಿರುಕುಳ ಕೊಡುವ ಇಂತಹ ಎಷ್ಟೋ ನಿದರ್ಶನಗಳು ಮುಚ್ಚಿ ಹೋಗುತ್ತವೆ. ಎಷ್ಟೋ ಹೆಣ್ಣುಮಕ್ಕಳು ಈ ಕಾರಣದಿಂದಲೇ ಶಾಲೆ ಬಿಡುತ್ತಾರೆ.

ಇಂತಹ ಸಂದರ್ಭದಲ್ಲಿ ತಂದೆ-ತಾಯಿಯಷ್ಟೇ ಮಹತ್ವದ ಪಾತ್ರ ವನ್ನು ಶಿಕ್ಷಕರು ಶಾಲೆಯಲ್ಲಿ ವಹಿಸುತ್ತಾರೆ. ಮನೆಗಳಲ್ಲಿ ಇಂತಹ ದೌರ್ಜನ್ಯವನ್ನು ಎಸಗುವ ಸಂದರ್ಭದಲ್ಲಿ ಕುಟುಂಬದಲ್ಲಿ ಈ ಸಂಗತಿಯನ್ನು ಕುರಿತು ಮಾತನಾಡುವುದು ಅಸಾಧ್ಯವಾಗಬಹುದು. ಇಂತಹ ಸಂದರ್ಭದಲ್ಲಿ ಶಾಲೆಗಳಲ್ಲಿ ಲೈಂಗಿಕ ಕಿರುಕುಳದ ಸ್ವರೂಪ, ಅದನ್ನು ಎದುರಿಸುವ ವಿಧಾನ, ಬೆಂಬಲ ಮುಂತಾದವುಗಳನ್ನು ನೀಡುವುದು ಅತ್ಯಗತ್ಯವಾಗುತ್ತದೆ. ಮೊದಲು ಶಿಕ್ಷಕರು ಹೆಣ್ಣು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದ ಬಗ್ಗೆ, ಜಾಗೃತಿಯನ್ನು ಪಡೆಯಬೇಕು. ಶಾಲೆಗಳಲ್ಲಿ ಈ ಕುರಿತು ಒಂದು ಸ್ಪಷ್ಟವಾದ ಧೋರಣೆ, ನಿಲುವನ್ನು ಹೊಂದಿರ ಬೇಕು. ಕಿರುಕುಳಕ್ಕೆ ಒಳಗಾದ ಮಕ್ಕಳು ಮುಕ್ತವಾಗಿ ಉಪಾಧ್ಯಾಯರ ಬಳಿ, ಮುಕ್ತವಾಗಿ ಹಂಚಿಕೊಳ್ಳುವ, ಚರ್ಚಿಸುವ ವಾತಾವರಣವನ್ನು ಉಂಟುಮಾಡಬಹುದು.

ಮೌರಿನ್ ಹರಾ, ತಾವು ಕೆಲಸ ಮಾಡುತ್ತಿದ್ದ ಶಾಲೆಯಲ್ಲಿ ತಾವು ಮಾಡಿದ ಪ್ರಯತ್ನವನ್ನು ಕುರಿತು ಈ ರೀತಿ ಹೇಳುತ್ತಾರೆ. 'ಈ ಶಾಲೆಯಲ್ಲಿ ನಾನು ಸ್ತ್ರೀವಾದಿ ದೃಷ್ಟಿಕೋನದಿಂದ, ಒಂದು ಒಳನೋಟವನ್ನೂ ಹೊಂದಿದ ಒಂದು 'ಪಾಲಿಸಿ'ಯನ್ನು ಜಾರಿಗೆ ತರಲು ಪ್ರಯತ್ನಿಸಿದೆ. ಇದು ಸಣ್ಣ ಶಾಲೆಯಾದುದರಿಂದ, ವಿದ್ಯಾರ್ಥಿ, ವಿಧ್ಯಾರ್ಥಿನಿಯರು, ಹಾಗೂ ಉಪಾಧ್ಯಾಯರ ಸಂಖ್ಯೆ ಕಡಿಮೆ ಇದ್ದುದರಿಂದ ಸಾಧ್ಯವಾಯಿತು. ನಿರಂತರ ವಾದ ಪ್ರಯತ್ನವನ್ನು ದೊಡ್ಡ, ಶಾಲೆಗಳನ್ನು ಮಾಡಬಹುದೆಂಬ ಭರವಸೆ ನನಗಿದೆ. ನನ್ನ ಪ್ರಯತ್ನಕ್ಕೆ ಋಣಾತ್ಮಕವಾಗಿ ಪ್ರತಿಕ್ರಿಯೆ ದೊರೆತಿದೆ.

ಶಾಲೆಯಲ್ಲಿ ಕೆಲಸಮಾಡುವ ಶಿಕ್ಷಕಿಯರು ಪ್ರತ್ಯೇಕವಾಗಿ ಸಭೆ ಸೇರಲು ಪ್ರಾರಂಭಿಸಿದರು. ಈ ಸಭೆಯಲ್ಲಿ, ಹುಡುಗರು, ಹಾಗೂ ಪುರುಷ ಉಪಾಧ್ಯಾಯರಿಂದ ಹುಡುಗಿಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಡೆಯಲು ಯಾವ ಅಸ್ತ್ರ ಉಪಯೋಗಿಸಬೇಕೆಂಬುದನ್ನು ಕೂಲಂಕುಶವಾಗಿ ಚರ್ಚಿಸಲಾಗುತ್ತಿತ್ತು. ಸಾಮಾನ್ಯವಾಗಿ ಸ್ತ್ರೀಯರ ಮೇಲೆ ನಡೆಯುವ ಹಿಂಸೆಯಿಂದ ಪ್ರಾರಂಭವಾದ ಚರ್ಚೆ ಹೆಣ್ಣು ಮಕ್ಕಳ ಮೇಲೆ ನಡೆಯುವ ಹಿಂಸೆಯ ವಿರುದ್ಧ, ಶಾಲೆಗಳಲ್ಲಿ ಯಾವ ರೀತಿಯ ಪಾಲಿಸಿಯನ್ನು ಅಳವಡಿಸಿಕೊಳ್ಳಬೇಕೆಂಬುದರ ಬಗ್ಗೆ ಕೊನೆಗೊಳ್ಳುತ್ತಿತ್ತು. ಈ ನಿಟ್ಟಿನಲ್ಲಿ ಮಹಿಳಾ ಗುಂಪುಗಳ ದೃಷ್ಟಿಕೋನ ಸಲಹೆಗಳ ಹಿನ್ನಲೆಯಲ್ಲಿ ಶಾಲೆಗಳಲ್ಲಿ ಅಳವಡಿಸಿಕೊಳ್ಳಬೇಕಾದ ಪಾಲಿಸಿಯನ್ನು ರೂಪಿಸಲಾಯಿತು.

ಈ ಪಾಲಿಸಿಯನ್ನು ಅಳವಡಿಸಿ ಕೊಳ್ಳ ಬೇಕೆಂದರೆ, ಎರಡು ಮುಖ್ಯಅಂಶಗಳು ಸ್ಪಷ್ಟವಾಗುವುದು ಅಗತ್ಯವಾಗಿತ್ತು. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಉಪಾಧ್ಯಾಯಿನಿಯರ ಮೇಲೆ ಬಲವಾದ ನಂಬಿಕೆ ಇಡುವಂತಹ ವಾತಾವರಣ ಸೃಷ್ಟಿಸುವುದು ಅಗತ್ಯವಾಗಿತ್ತು. ಅವರು ತಮ್ಮ ಮೇಲಿನ ಕಿರುಕುಳವನ್ನು ಬಹಿರಂಗ ಪಡಿಸಿದರೆ, ಅವರಿಗೆ ಅಗತ್ಯವಾದ ಬೆಂಬಲ ನೀಡುವ ಭರವಸೆಯನ್ನು ನೀಡಬೇಕಾಗುತ್ತಿತ್ತು. ಒಂದು ವಿದ್ಯಾಸಂಸ್ಥೆಯಾಗಿ, ಯಾವ ರೀತಿಯ ಪ್ರತಿಕ್ರಿಯೆಯನ್ನು ನೀಡಬಹುದೆಂಬುದರ ಬಗ್ಗೆ ಸ್ಪಷ್ಟತೆ ಬಹುಮುಖ್ಯವಾಗಿತ್ತು.

ಶಾಲೆಗಳಲ್ಲಿ ಅಳವಡಿಸಿಕೊಳ್ಳಬಹುದಾದ ಈ ಪಾಲಿಸಿಯನ್ನು ಒಟ್ಟು ಶಾಲೆಯ ವಾತಾವರಣದಿಂದ ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ. ಒಂದು ಬಾರಿ ತಮ್ಮ ಮೇಲೆ ನಡೆದ ದೌರ್ಜನ್ಯವನ್ನು ಬಹಿರಂಗ ಪಡಿಸಿದ ನಂತರ ತಮಗೆ ಅಗತ್ಯವಾದ ರಕ್ಷಣೆಯನ್ನು ನೀಡುವರೆಂಬ ನಿರೀಕ್ಷೆಯನ್ನು ಮಕ್ಕಳು ಹೊಂದಿರುತ್ತಾರೆ.

ಇಂತಹ ಸಮಸ್ಯೆಯನ್ನು ಕೈಗೆತ್ತಿಕೊಳ್ಳುವಾಗ, ಸಾಮಾನ್ಯವಾಗಿ ಮಹಿಳೆಯರ ಮೇಲೆ ನಡೆಯುವ ಹಿಂಸೆಯ ಬಗ್ಗೆ ಅರಿವಿರಬೇಕಾಗುತ್ತದೆ. ಜಾತಿ, ವರ್ಗ, ಪ್ರಾದೇಶಿಕತೆ ಎಲ್ಲವನ್ನು ಮೀರಿ ಈ ಹಿಂಸೆ ನಡೆಯುತ್ತಿದೆ. ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ಇತರ ಹಿಂಸೆಯ ಸ್ವರೂಪದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಇದು ಸ್ಪಷ್ಟವಾಗಿರಬೇಕಾಗುತ್ತದೆ.

ಈ ದೃಷ್ಟಿಯಲ್ಲಿ ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡುವುದು ಅತ್ಯಗತ್ಯವಾಗುತ್ತದೆ. ಮಡಿವಂತಿಕೆಯನ್ನು ಬಿಟ್ಟು ಈ ನಿಟ್ಟಿನಲ್ಲಿ ಯೋಚಿಸ ಬೇಕಾಗುತ್ತದೆ. ಲೈಂಗಿಕ ಶಿಕ್ಷಣದಿಂದ ವಿಶೇಷವಾಗಿ ಹೆಣ್ಣು ಮಕ್ಕಳಲ್ಲಿ ದೌರ್ಜನ್ಯ ಹಾಗೂ ಆಯ್ಕೆಯ ನಡುವಿನ ವ್ಯತ್ಯಾಸದ ಅರಿವು ಉಂಟಾಗುತ್ತದೆ. ಸಾಮಾನ್ಯವಾಗಿ ವಿಜ್ಞಾನದ ಪಾಠದಲ್ಲಿ ಸಂತಾನಾಭಿವೃದ್ಧಿ ಹಾಗೂ ಸಂತಾನ ನಿಯಂತ್ರಣವನ್ನು ಕುರಿತು ಬೋಧಿಸಲಾಗುವುದು. ಮಹಿಳಾ ಲೈಂಗಿಕತ್ವ ದ ಬಗ್ಗೆ ಶಾಲೆಯಲ್ಲಿ ಚರ್ಚಿಸುವುದನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ.

ಮಹಿಳೆಯ ದೈಹಿಕ ರಚನೆಯ ವಿವರವನ್ನು ಬೋಧಿಸುವುದು ಸಹ ಎಲ್ಲೂ ಕಂಡು ಬರುವುದಿಲ್ಲ. ಲೈಂಗಿಕ ದೌರ್ಜನ್ಯವನ್ನು ವಿರೋಧಿಸುವ, ಪ್ರತಿಭಟಿಸುವ ಸವಾಲು ಪ್ರಾರಂಭವಾಗುವುದೇ ಮಹಿಳಾ ಲೈಂಗಿಕತ್ವದ ಶಿಕ್ಷಣದಿಂದ. ಈ ಶಿಕ್ಷಣದ ಕೇಂದ್ರ ಬಿಂದು, ಅವಳು ಇತರರೊಡನೆ ಹೊಂದಿದ ಅಥವಾ ಹೊಂದಬಹುದಾದ ಸಂಬಂಧ ಕುರಿತಾದುದಲ್ಲ "ಅದು ಅವಳನ್ನು ಕುರಿತು ಅವಳು

ಹೊಂದಿದ ಭಾವನೆಗಳ ಬಗ್ಗೆ". ಒಬ್ಬ ಯುವತಿ, ತನ್ನ ಬಗ್ಗೆ, ತನ್ನ ಲೈಂಗಿಕತ್ವದ ಬಗ್ಗೆ ಸ್ಪಷ್ಟವಾದ ಭಾವನೆಯನ್ನು ಹೊಂದಿದ್ದರೆ ಆಕೆ ತನ್ನ ಲೈಂಗಿಕ ಸಂಬಂಧದ ಉತ್ತಮ ಆಯ್ಕೆಯನ್ನು ಮಾಡಬಲ್ಲಳು ಒತ್ತಾಯ, ಹಿಂಸೆ, ದೌರ್ಜನ್ಯವನ್ನು ಎದುರಿಸುವಲ್ಲಿ ಅವರು ಶಕ್ತರಾಗುತ್ತಾರೆ.

ಲೈಂಗಿಕ ಸಂಬಂಧದಲ್ಲಿ ದೌರ್ಜನ್ಯ ಶೋಷಣೆ ಹಾಗೂ ಪರಸ್ಪರ ಒಪ್ಪಿಗೆಯ ನಡುವಿರುವ ವ್ಯತ್ಯಾಸವನ್ನು ಗುರುತಿಸಲು ಅವರಿಗೆ ಸಾಧ್ಯವಾಗುತ್ತದೆ. ಈ ಅರಿವು ಮೂಡಿದ್ದರೆ ಮಾತ್ರ ಅವರು ತಮ್ಮನ್ನೂ ತಾವು ರಕ್ಷಿಸಿ ಕೊಳ್ಳಲು ಸಾಧ್ಯವಾಗುತ್ತದೆ. ಒಂದು ಪಕ್ಷ ಲೈಂಗಿಕ ದೌರ್ಜನ್ಯ ನಡೆದಿದ್ದು. ಅದನ್ನು ಬಹಿರಂಗಗೊಳಿಸದಿದ್ದರೂ, ಅದರ ವಿರುದ್ಧ ತಮ್ಮನ್ನು ರಕ್ಷಣೆ ಮಾಡಿಕೊಳ್ಳುವ ವಿಧಾನವನ್ನು ರೂಢಿಗೊಳಿಸಿಕೊಂಡಿದ್ದರೆ ಅಷ್ಟೇ ಸಾಕು. ಇದು ಮಕ್ಕಳಲ್ಲಿ ಧನಾತ್ಮಕ ಪರಿಣಾಮವನ್ನು ಬೀರುತ್ತದೆ. ಈ ನಿಟ್ಟಿನಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸುವುದು ಬಹುಮುಖ್ಯವಾಗುತ್ತದೆ.

ತನ್ನ ಮೇಲೆ ನಡೆದ ಲೈಂಗಿಕ ದೌರ್ಜನ್ಯವನ್ನು ಮಕ್ಕಳು ಮುಕ್ತವಾಗಿ ಹೇಳಿಕೊಳ್ಳುವ ವಾತಾವರಣವನ್ನು ಸೃಷ್ಟಿಸಬೇಕು.

ಮಕ್ಕಳಿಗೆ ಶಿಕ್ಷಕಿಯರ ಮೇಲೆ ನಂಬಿಕೆ ಬಲವಾಗಿ ಮೂಡಬೇಕು.

ತಮ್ಮ ಮೇಲಿನ ದೌರ್ಜನ್ಯವನ್ನು ಬಹಿರಂಗವಾಗಿ ಹೇಳುವುದರಿಂದ ಅವರು ಮಾನಸಿಕ ಹಾಗೂ ಭಾವನಾತ್ಮಕವಾಗಿ ಕುಸಿಯದಂತೆ ಬೆಂಬಲ ನೀಡಬೇಕು.

ಇಂತಹ ಸಂದರ್ಭದಲ್ಲಿ ಅವರ ಮುಂದಿರುವ ಆಯ್ಕೆಗಳನ್ನು ಹೇಳ ಬೇಕಾಗುತ್ತದೆ.

ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಅಗತ್ಯವಾದ ಹಾಗೂ ಪೂರಕವಾದ ಶಿಕ್ಷಣವನ್ನು ಅವರಿಗೆ ನೀಡಬೇಕಾಗುತ್ತದೆ.

ಪುಸ್ತಕ - ಪರಿಚಯ

ಕೃತಿಯ ಹೆಸರು : ಮಲಯಾಳದ 10 ಕಥೆಗಾರ್ತಿಯರು

ಸಂಪಾದಕಿ : ಡಾ॥ ಶ್ರೀದೇವಿ. ಕೆ. ನಾಯರ್

ಕನ್ನಡಾನುವಾದ : ಪ್ರೊ.ಪಾರ್ವತಿ.ಜಿ.ಐತಾಳ್

ಪ್ರಕಾಶಕರು : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಎಂಜಿಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001

ಮುದ್ರಣ-2004, ಪುಟಗಳು-192
ಪುಟಗಳು,ಬೆಲೆ ರೂ:95/

ಮಲೆಯಾಳದ 10 ಕಥೆಗಾರ್ತಿಯರು - ಕನ್ನಡಕ್ಕೊಂದು ಒಳ್ಳೆ ಗ್ರಂಥ ಅನುವಾದಗೊಂಡು ಬಂದಿದೆ. ಅನುವಾದಿಸಿದವರು ಪ್ರೋ. ಪಾರ್ವತಿ ಜಿ.ಐತಾಳ. ಕನ್ನಡದಲ್ಲಿ ಸೃಜನಶೀಲ ಲೇಖಕಿಯಾಗಿ ಅನೇಕ ಕಥೆ-ಕವನ-ಲೇಖನಗಳನ್ನು ಸ್ವತಂತ್ರವಾಗಿ ರಚಿಸಿರುವರು. ಲೇಖಕಿಯೇ ಹೇಳಿರುವಂತೆ ಅನುವಾದದ ಕೆಲಸ ತುಂಬಾ ತ್ರಾಸದಾಯಕವಾದದು. ಅದೊಂದು ಪುನರ್ಸೃಷ್ಟಿ! ಲೇಖಕಿ ಈ ಮರುಸೃಷ್ಟಿಯ ಕಾರ್ಯದಲ್ಲಿ ಯಶಸ್ವಿ ಆಗಿದ್ದಾರೆ.

ಪ್ರಸ್ತುತ ಮಲೆಯಾಳದಲ್ಲಿ ಸಣ್ಣಕಥೆ ಬರೆಯುತ್ತಿರುವ ದಿಟ್ಟ ಹಾಗೂ ಪ್ರತಿಭಾವಂತ 10 ಮಂದಿ ಕಥೆಗಾರ್ತಿಯರ ಪರಿಚಯ-ಪ್ರಾಸ್ತಾವಿಕ-ಸಂದರ್ಶನ-ಕಥೆಯನ್ನಾಧರಿಸಿದ ಗ್ರಂಥ. ಅನುವಾದವೆಂಬ ಸಣ್ಣ ಸಂಶಯವೂ ಬರದಂತೆ ಸ್ವತಂತ್ರ ಕೃತಿಯೇನೋ ಅನಿಸುವಷ್ಟರ ಮಟ್ಟಿಗೆ ತಾಜಾತನದಿಂದ ಓದಿಸಿಕೊಂಡು ಹೋಗುತ್ತದೆ.

ಲೇಖಕಿಯರನ್ನು ಒಂದೆಡೆ ಕಲೆಹಾಕಿ, ಅವರ ಕೆಲಸವನ್ನು ಗುರುತಿಸುವ, ದಾಖಲಿಸುವ ತುರ್ತುಕಾರ್ಯ ಇಂದು ಎಲ್ಲಾ ಕ್ಷೇತ್ರದಲ್ಲೂ ಬಹಳ ಅವಶ್ಯವಿದೆ ಮತ್ತು ತುಂಬಾ ಮಹತ್ವದಾಗಿದೆ.

ಕರ್ನಾಟಕ ಲೇಖಕಿಯರ ಪರಿಷತ್ತು, ಬೆಂಗಳೂರು - ಕನ್ನಡದಲ್ಲಿ ಬರೆಯುತ್ತಿರುವ ಲೇಖಕಿಯರ ಸ್ವಾನುಭವ, ಬರಹಗಾರ್ತಿಯಾಗಿ ಅವರು ರೂಪುಗೊಂಡ ಬಗೆ, ಕುರಿತಂತೆ 'ಲೇಖ-ಲೋಕ' ಎಂಬ 4-5 ಸಂಪುಟಗಳನ್ನು ಹೊರತಂದಿರುವುದು ಸಮಾಧಾನಕರ ಸಂಗತಿ.

ಇಲ್ಲಿರುವ ಕಥೆಗಾರ್ತಿಯರ ಕತೆಗಳು ವಸ್ತು-ವೈವಿಧ್ಯತೆಗಳಿಂದ ಕೂಡಿದ್ದು , ಲೇಖಕಿಯರದು ಎಂಬ ರಿಯಾಯಿತಿಯನ್ನೇನೂ ಅವು ಬೇಡುವುದಿಲ್ಲ.

ಸ್ತ್ರೀವಾದ ಇಂದು ಹೊಸ ಸಾಧ್ಯತೆಗಳೆಡೆಗೆ ಮುಖ ಮಾಡಿ ನಿಂತಿರುವ ಹೊತ್ತಿನಲ್ಲಿ-ಇದಕ್ಕೆ ಮಹಿಳಾ ಲೇಖಕಿಯರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಸಂದರ್ಶನದ-ದೀರ್ಘಮಾತುಕತೆಯ ಮೂಲಕ ಅವರ ಖಚಿತ ಧೋರಣೆ ಹಾಗೂ ಸ್ಪಷ್ಟ ಉತ್ತರಗಳನ್ನು ಪಡೆದುಕೊಳ್ಳಲಾಗಿದೆ.

ಮತ್ತೊಂದು ಬಹಳ ಮುಖ್ಯವಾದ ವಿಚಾರದೆಡೆಗೂ ಕೃತಿ ನಮ್ಮ ಗಮನ ಸೆಳೆಯುತ್ತದೆ. 'ಮಹಿಳಾ ಸಾಹಿತ್ಯ' ವೆಂದು ಲೇಬಲ್ ಹಚ್ಚಿ ನೋಡುವ ಸಾಹಿತ್ಯವಲಯದ ಕುತ್ಸಿತ ಧೋರಣೆಯನ್ನು ಇಲ್ಲಿಯ ಲೇಖಕಿಯರು ತಮ್ಮ ಗಟ್ಟಿಯಾದ ನಿಲುವು ಹಾಗೂ ಸಶಕ್ತ ಸಾಹಿತ್ಯ ರಚನೆಗಳ ಮೂಲಕ ಮೆಟ್ಟಿನಿಂತಿದ್ದಾರೆ.

"ಯಾರೂ ಬರೆದರೂ ಏನು ಬರೆದರೂ ಬರಹ ಬರಹವೇ ಅಲ್ಲವೇ ?" ಎಂಬ ದಿಟ್ಟ ಉತ್ತರ ಸ್ತ್ರೀ ಬರಹ ಕುರಿತಂತಿರುವ ಮಿಥ್ಯಾರೋಪಗಳನ್ನು ಅಲ್ಲಗೆಳೆಯುವಂತಿದೆ ಇಲ್ಲಿನ ಬರಹಗಾರ್ತಿಯರು ಬರವಣಿಗೆಯ ವಿಕಾಸಕ್ಕೆ ಬೇಕಾಗುವ ಓದು-ಚರ್ಚೆ-ಸಂವಾದ-ಸಂಚಾರ, ಇವುಗಳ ಮಹತ್ವವನ್ನು ಚೆನ್ನಾಗಿ ಅರಿತಿರುವುದು ಆಶಾದಾಯಕವಾಗಿದೆ.

ಪ್ರತಿಯೊಬ್ಬ ಕಥೆಗಾರ್ತಿ ಎದುರಿಸುತ್ತಿರುವ ಬಹು ದೊಡ್ಡ ಸವಾಲಿನ ಕುರಿತು ಕೃತಿ ಬೆಳಕು ಚೆಲ್ಲುತ್ತದೆ. ಅದೇನೆಂದರೆ - ಸ್ತ್ರೀಯರ ಕಥೆಗಳಲ್ಲಿ ಆತ್ಮಕಥಾಂಶವಿದೆಯೋ ಎಂಬುದನ್ನು ಹುಡುಕಿ, ಅವರ ಖಾಸಗಿ ಬದುಕನ್ನು ಕೆದಕಿ ನೋಡುವುದು..... ಈ ಕಾರಣದಿಂದಲೇ ಎಷ್ಟೋಮಂದಿ ಬರಹಗಾರ್ತಿಯರ ಸಾಹಿತ್ಯ ಜೀವನದಲ್ಲಿ ದೀರ್ಘವಾದ ಮಧ್ಯಂತರ ಕಾಣಿಸಿಕೊಂಡದ್ದಿದೆ. ಕೆಲವರು ಪುನರ್ ಪ್ರವೇಶದಿಂದ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದವರಾದರೂ ಉದಾಗೆ : ಸಾರಾ ಜೋಸೆಫ್, ಗ್ರೇಸಿ, ಚಂದ್ರಮತಿ ಮುಂತಾದವರು... ಅನೇಕ ಲೇಖಕಿಯರು ಮೌನಕ್ಕೆ ಶರಣಾಗಿ ನೇಪಥ್ಯಕ್ಕೆ ಸರಿದು ಬಿಟ್ಟಿದ್ದಾರೆ. ಮುಖ್ಯವಾಗಿ ಹೆಸರಿಸಬಹುದಾದ ಕಥೆಗಾರ್ತಿಯೆಂದರೆ ರಾಜಲಕ್ಷ್ಮಿಯವರು.

ಇಲ್ಲಿನ ಲೇಖಕಿಯರು ಬದುಕು-ಸಮಾಜ ಕೊಟ್ಟ ನೋವು-ವೇದನೆ-ಆಘಾತ-ಗಳದ್ದೇ ಬೆಳಕು ಸೂಸುವ ಕಥೆಗಳಾಗಿ ಪರಿವರ್ತಿಸಿದ್ದಾರೆ.

ಕಥೆಗಾರ್ತಿ ಸುಹರಾ ಪ್ರತಿಕ್ರಿಯಿಸಿರುವಂತೆ "ಎಲ್ಲರೂ ಭಾಗಶಃ ಆದರೂ ತಮ್ಮನ್ನೇ ತಾವು ಬರೆದುಕೊಳ್ಳುದವರು".

ಕಥೆಗಾರ್ತಿ ಅಷಿತಾ ಹೇಳುವಂತೆ "ನನಗೆ ಮನೆಯಿಂದ ಇದು ತನಕ ಬರವಣಿಗೆಗೆ ಒಮ್ಮೆಯೂ ಯಾವ ಪ್ರೋತ್ಸಾಹವೂ, ಸಿಕ್ಕಿಲ್ಲ"....

ಹೀಗಿದ್ದು ಇವರು ಯಾಕೆ ಬರೆಯುತ್ತಾರೆ ಅಂದರೆ - ಬರವಣಿಗೆಯೆಂದರೆ ಅದು ಅವರ ಅಸ್ತಿತ್ವ, ಅವರ ಜೀವನ, ಬರವಣಿಗೆಯಿಲ್ಲದಿದ್ದರೆ ಅವರಿಲ್ಲ.

ಗೀತಾ ಹಿರಣ್ಯನ್‌ರಿಗೆ - "ಬರವಣಿಗೆಯೆಂದರೆ ನನ್ನನ್ನೇ ನಾನು ಓದಿಕೊಳ್ಳುವ ಒಂದು ಪ್ರಕ್ರಿಯೆ - ಹೀಗೆ ಹೇಳುತ್ತಾ ತನ್ನ ಮೂಲಕ ತನ್ನನ್ನು, ಇತರ ಸ್ತ್ರೀಯರನ್ನು, ಅವರ ಮೂಲಕ ಮನುಷ್ಯ ಕುಲವನ್ನೇ ಓದಿ ತಿಳಿದುಕೊಳ್ಳುವ ಪ್ರಯತ್ನ ನಡೆಸುತ್ತಾರೆ.

ಕಥೆಗಾರ್ತಿ ಅಷಿತಾ ಹೇಳುವಂತೆ- ಬರವಣಿಗೆಯಲ್ಲಿ ಮನಸ್ಸು ಬಿಚ್ಚಿ ಮಾತನಾಡುವ ಸ್ವಾತಂತ್ರ್ಯವನ್ನು ಬರಹಗಾರ್ತಿಯರಲ್ಲಿ ಯಾರಿಗೂ ಮಲೆಯಾಳ ಸಮಾಜ ನೀಡಿಲ್ಲ. ಇಲ್ಲಿಯೇ ವಿಸ್ತರಿಸಿ ಹೇಳಬಹುದಾದುದೆಂದರೆ ಕೇವಲ ಮಲಯಾಳವೇ ಮಾತ್ರವಲ್ಲ, ವಿಶ್ವದ ಯಾವುದೇ ಸಮಾಜ ಕೂಡಾ ಬರಹಗಾರ್ತಿಯರಿಗೆ ಆ ಸ್ವಾತಂತ್ರ್ಯವನ್ನು ನೀಡಿಲ್ಲ ಎನ್ನಬಹುದು. ಸ್ತ್ರೀಯ ಕನಸುಗಳಿಗೂ ಶೀಲವೆನ್ನುವುದು ಅತ್ಯಗತ್ಯವೆಂದು ಕಟ್ಟುನಿಟ್ಟು ಮಾಡಿದ ಸಮಾಜ-ಕಥೆ ಬರೆದಿದ್ದಕ್ಕೆ ಸಮಾಜದಿಂದ ಕ್ರೂರವಾಗಿ ಶಿಕ್ಷಿಸಲ್ಪಟ್ಟ ಮಲೆಯಾಳದ ಹೆಸರಾಂತ ಕಥೆಗಾರ್ತಿ ಮಾಧವಿ ಕುಟ್ಟಿ ತಮ್ಮ ನೋವನ್ನು ಹೀಗೆ ಬಿಚ್ಚಿಡುತ್ತಾರೆ "ಒಳ್ಳೆಯ ಸಾಹಿತ್ಯ ಬರಬೇಕಿದ್ದರೆ ಬರಹಗಾರ್ತಿಯರಿಗೆ ಏನನ್ನು ಬೇಕಾದರೂ ತೆರೆದ ಮನಸ್ಸಿನಿಂದ ಬರೆಯುವ ಸ್ವಾತಂತ್ರ್ಯ ಬೇಕು". ಅದು ಇಲ್ಲಿ ಎಂದಾದರೂ ಸಿಕ್ಕಿತೇ ? ಎಂಬ ಪ್ರಶ್ನೆ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ.

ಇಲ್ಲಿ ಆಯ್ದುಕೊಂಡಿರುವ ಕಥೆಗಾರ್ತಿಯರ ಪ್ರಾತಿನಿಧಿಕ ಕಥೆಗಳು - ಸಣ್ಣ ಕಥಾ ಪ್ರಪಂಚದಲ್ಲಿಯೇ ಅತ್ಯಂತ ವಿಶಿಷ್ಟವೆನಿಸಿವೆ. ಕಥಾ ಆಶಯ-ಅಭಿವ್ಯಕ್ತಿ ತಂತ್ರ ಹಾಗೂ ಕಥಾ ಸಂವಿಧಾನದಲ್ಲಿ ಹೊಸತನವಿದ್ದು, ಹೆಣ್ಣಿನ ಸಂಕೀರ್ಣ ಸಮಸ್ಯೆಗಳ ಮೇಲೆ ಅವು ಬೆಳಕು ಚೆಲ್ಲುತ್ತವೆ. ಇಲ್ಲಿಯ ಕಥೆಗಳು ಬಹುಕಾಲ ಓದುಗರ ಮನದಲ್ಲಿ ಉಳಿಯುತ್ತವೆ.

ಉದಾಗೆ : ಸಿತಾರವರ - 'ಅಗ್ನಿ' ಸುಹರಾರವರ -'ಹುಚ್ಚು' - ಗೀತಾಹಿರಣ್ಯನರ 'ಅಸಂಘಟಿತೆ', ಅಷಿತಾರ - 'ಅಪೂರ್ಣ ವಿರಾಮಗಳು' ಮುಂತಾದ ಕಥೆಗಳು.

ಪಾರ್ವತಿಯವರ ಅನುವಾದ ಇಲ್ಲಿ ಕೇವಲ ಭಾಷಾನುವಾದ, ಶಬ್ದಾನುವಾದವಾಗಿರದೇ, ಅದು ಇಲ್ಲಿಯ ಪ್ರಾದೇಶಿಕ ಸೊಗಡನ್ನು

ವೈಗೂಡಿಸಿಕೊಂಡಿರುವ ರೀತಿಗೆ ಕತೆ ಎಲ್ಲಿಯೂ ನೆರೆಭಾಷೆಯದು ಎಂದು ಅನಿಸುವುದೇ ಇಲ್ಲ. ಉದಾ: ಗೆ: ಸಾರಾ ಜೋಸೇಪ್‌ರ 'ಪ್ರಕಾಶಿನಿಯ ಮಕ್ಕಳು' ಕಥೆಯಲ್ಲಿ ಬರುವ- 'ಅದುಕ್ಕೆಯಂತದ್ದೋ ರ್‍ಯಾಗ ಬಡದೈತೆ, ಯಂತದನ್ನೋ ಕಂಡು ಎದರ್‍ಕೊಂಡೈತೇ..... ಇಲ್ಲಿ ಬಾ ಮಗಾ"..... ಇನ್ನೂ ಮುಂತಾದ ಮಾತುಗಳು... ಲೇಖಕಿ ಇಲ್ಲಿನ ಭಾಷಾ ನುಡಿಗಟ್ಟನ್ನು ಬಹಳ ಸಮರ್ಥವಾಗಿ ದುಡಿಸಿಕೊಂಡಿರುವುದಕ್ಕೆ ಸಾಕ್ಷಿಯಾಗಿವೆ.

ಸದ್ಯ ಮಲಯಾಳದಲ್ಲಿ ಬರೆಯುತ್ತಿರುವ ಲೇಖಕಿಯರ ಬಗ್ಗೆ ಮಾತ್ರವೇ ಮಾಹಿತಿ ದೊರಕಿ, ಹಿಂದಿನ ಲೇಖಕಿಯರ ಕುರಿತು ಕಿರು ಪರಿಚಯವನ್ನಾದರೂ ಇದರ ಜತೆಗೆ ನೀಡಬಹುದಿತ್ತಲ್ಲ ಎಂಬ ಸಣ್ಣ ಅತೃಪ್ತಿ ಕೃತಿಕೆಳಗಿಡುವ ಮುನ್ನ ಉಂಟಾಗುತ್ತದೆ.

ಸಿ. ಹೇಮಲತಾ, ಮೈಸೂರು.

ಗುಡ್ಡಗಾಡು ಜನರಲ್ಲಿ ಶಿಶುಹತ್ಯೆ

ನಲಗೊಂಡ ಎಂಬ ಗುಡ್ಡಗಾಡು ಜನರು ವಾಸಿಸುವ ಪ್ರದೇಶದಲ್ಲಿ ಹೆಣ್ಣು ಮಗುವೆನ್ನುವುದು ಒಂದು ಶಾಪವೇ ಸರಿ. ಹೆಣ್ಣು ಶಿಶು ಹತ್ಯೆ ಇಲ್ಲಿ ಸರ್ವೇಸಾಮಾನ್ಯ. ಈಗ ಸುಲಭ ಮತ್ತು ಉತ್ತಮ ಆಯ್ಕೆಯೆಂದರೆ, ಹೆಣ್ಣುಮಗುವನ್ನು ಮಾರಿಕೊಳ್ಳುವುದೇ ಆಗಿದೆ.

ಇದಕ್ಕೆ ಕಾರಣವೆಂದರೆ, ಸಂಪ್ರದಾಯಿಕ ಆಚರಣೆ, ಹೆಣ್ಣುಮಗು ತಂದೆಯ ಆಸ್ತಿಯಲ್ಲಿ ಪಾಲು ಪಡೆಯಲು ಅರ್ಹಳಾಗಿದ್ದಾಳೆ. ಹೀಗಾಗಿ ಹೆಣ್ಣುಮಕ್ಕಳು ತಮ್ಮೊಂದಿಗೆ ತಂದೆಯ ಆಸ್ತಿಯ ಪಾಲನ್ನೂ ತೆಗೆದುಕೊಂಡು ಹೋಗುತ್ತಾರೆ. ಕುಟುಂಬದಿಂದ ಮದುವೆ ಮಾಡಿ ಕಳಿಸುವುದೆಂದರೆ, ದೊಡ್ಡಮೊತ್ತದ ವರದಕ್ಷಿಣೆ ಕೊಡಬೇಕು. ತಂದೆಗೆ ಗಂಡು ಮಗು ಇಲ್ಲದಿದ್ದಲ್ಲಿ ಅವನ ಸೋದರರಿಗೆ ಆಸ್ತಿ ಸೇರುತ್ತದೆ.

ಗುಡ್ಡಗಾಡು ಜನರಿರುವ ಸುಮಾರು ಅರವತ್ತು ಹಳ್ಳಿಗಳ ಪ್ರತಿ ಕುಟುಂಬದಲ್ಲೂ ಕನಿಷ್ಠ ಎರಡು ಹೆಣ್ಣು ಮಕ್ಕಳ ಸಾವು ಸಂಭವಿಸುತ್ತದೆ. ಕುಟುಂಬದಲ್ಲಿ ಹತ್ತರಿಂದ ಹದಿನೈದು ಮಕ್ಕಳಿರುತ್ತವಾದರೂ ಹೆಣ್ಣುಮಕ್ಕಳು ಇರುವುದಿಲ್ಲ.

ಕೆಲವೊಮ್ಮೆ ಅವರು ತಮ್ಮ ಹೆಣ್ಣುಮಕ್ಕಳನ್ನು ದತ್ತು ಸ್ವೀಕಾರಕ್ಕಾಗಿ ಈಗ ಹೊರದೇಶಗಳಿಗೆ ಕಳುಹಿಸುವ ಸಂಸ್ಥೆಗಳಿಗೆ ಕೊಟ್ಟುಬಿಡುತ್ತಾರೆ.

-ಇಂಡಿಯನ್ ಎಕ್ಸ್‌ಪ್ರೆಸ್: Vol ಸಂ.10.4.1999

ಮಹಿಳೆಯರ ಮರಣದರ - 1994 -1997

ವಯೋಗುಂಪು	1995	1997
0-4	25.3	24.5
5-14	2.1	1.8
15-39	2.7	2.6
35-49	4.2	3.8
60+	45.9	44.4
ಎಲ್ಲಾ ವಯಸ್ಸಿನ ಮಹಿಳೆಯರು	10.2	8.6
ತಾಯಂದಿರ ಮರಣದರ	ಸಾವಿರಕ್ಕೆ	ಸಾವಿರಕ್ಕೆ
	437	408

ಪಟ್ಟಿ ಸಂಖ್ಯೆ
0-6 ವಯೋಗುಂಪಿನ ಮಕ್ಕಳ ಲಿಂಗ ಪ್ರಮಾಣ
1991 ಮತ್ತು 2001 ಜನಗಣತಿ

ನಗರ	1991	2001
ದೆಹಲಿ	904	850
ಮುಂಬಯಿ	942	898
ಪುಣೆ	943	906
ಅಮೃತಸರ	861	783
ಪಾಟಿಯಾಲ	871	770
ಅಂಬಾಲಾ	888	784
ಗುರ್‌ಗಾಂವ	895	863
ಫರೀದಾಬಾದ್	884	856
ಕುರುಕ್ಷೇತ್ರ	868	770
ಅಹಮದಾಬಾದ್	896	814
ವಡೋದರ	934	873
ರಾಜಕೋಟ	914	844
ಜೈಪುರ	925	897
ಅಖಿಲ ಭಾರತ	945	927

ಮೂಲ : ಹ್ಯೂಮನ್ ಟಚ್ : Vol 1 : ನಂ 3, ಜೂನ್, 2004

ನಡು ಮಧ್ಯಾಹ್ನದ ಪ್ರಣಯ

ಡಾ। ಬಿ.ಎಸ್. ಸುಮಿತ್ರಾಬಾಯಿ

'ಸಾಯಂಕಾಲೇ ವಸಾಂತೇ ಕುಸುಮಿತ ಸಮಯೇ
ಹುಣ್ಣಿಮೆ ಬೆಳಕಲ್ಲಿ ಮರಳುದಂಡೆಯ ಮೇಲೆ
ನಿನ್ನೊಂದಿಗೆ ನಡೆವಾಗ ಪ್ರಿಯೇ......'
ಎಂದು ಸಂಸ್ಕೃತದ ಶ್ಲೋಕವೊಂದನ್ನು ನೆನೆಯುತ್ತಾ
ಅವನೊಂದಿಗೆ ಅವಳು ನಡೆದಿದ್ದಳು
ನಡುಬಿಸಿಲಲ್ಲಿ, ಕಾದ ಟಾರು ರಸ್ತೆಯಲ್ಲಿ.

ನಡೆನಡೆದು ಲೈಬ್ರರಿ ಮುಂದಿದ್ದ
ಕಲ್ಲುಬೆಂಚಿನ ಮೇಲೆ ಕೂತರು.
ಲಗುಬಗೆಯಿಂದ ಸಡಗರಿಸಿ ಎದ್ದವನು
ಕೈಗಾಡಿಯಲ್ಲಿ ಫ್ರೂಟ್ ಸಲಾಡ್ ತಯಾರಿಸುವ
ಹುಡುಗನಿಂದ ಎರಡು ಪ್ಲೇಟ್ ಕೊಂಡು ತಂದ.
ಕಡ್ಡಿ ಚುಚ್ಚಿ ಬಾಯಿಗಿಳಿಸಿದ ಹಣ್ಣಿನ ತುಂಡುಗಳು
ಬಾಳೆಯೋ ಪಪ್ಪಾಯಿಯೋ ತಿಳಿಯಲಿಲ್ಲ.

ಅವಳು ಯೋಚಿಸಿದಳು - ರುಚಿಯ ಬಗ್ಗೆ ಅಲ್ಲ
ನಾಳೆ ಕೀಳಿಸಬೇಕಿದ್ದ ನೋಯುವ ಹಲ್ಲುಗಳ ಬಗ್ಗೆ
ಕಟ್ಟಿಸ ಬಯಸಿದ್ದ ಹಲ್ಲುಸೆಟ್ಟಿನ ಕ್ವಾಲಿಟಿಯ ಬಗ್ಗೆ
ಅದು ತನ್ನ ಮುಖಕ್ಕೆ ಹೊಂದುತ್ತದಾ ಎಂಬ ಬಗ್ಗೆ.
ಅವನು ಹಣ್ಣು ಚಪ್ಪರಿಸುತ್ತಾ ಅದಾಗಲೇ ತಾನು ಮಾಡಿದ್ದ ಭಾಷಣ,
ಜನರಿಂದ ಸಿಕ್ಕಿದ್ದ ಚಪ್ಪಾಳೆ, ಅಭಿನಂದನೆಯ ಹಿಗ್ಗಿನಲ್ಲಿದ್ದ.
ತಿಂದು ಮುಗಿದಾಗ ಇಬ್ಬರೂ ಎದ್ದು ಆಟೋಗಾಗಿ ಕಾದರು.

'ಸುಧಾಮ ಲೇಔಟ್‌ಗೆ ಬರ್‍ತೀರಾ?'
ಹೆಸರು ಕೇಳಿಯೇ ಇಲ್ಲವೆನ್ನಲೂ ಪುರಸೊತ್ತಿಲ್ಲದೆ ಪರಾರಿ
ಆಗುವ ಆಟೋಗಳ ಪರಿಗೆ ಬೇಸತ್ತು
ಸುಡುವ ಆಕಾಶದ ನೆರಳಲ್ಲಿ ಕಾದ ನೆಲದಲ್ಲಿ
ಕಾಯುತ್ತಿರುವಾಗ ಯಾಕೋ ಕಾಡಿದರು ಬೇಂದ್ರೆ -

'ಹಳ್ಳಾದ ದಂಡ್ಯಾಗS ಮೊದಲಿಗೆ ಕಂಡಾಗS
ಏಸೊಂದು ನಗಿ ಇತ್ತSS..... ಆ ನಗಿ ಹೋಗೇತಿ ಎತ್ತೆತ್ತ SS ?'
ಲೇ, ನೆಟ್ಟಗೆ ನೋಡಿಕೊಂಡು ನಡೀಬಾರ್‍ದೆ ?
ಸೀದಾ ಹೋಗಿ ಆ ಒಳಚರಂಡಿಯ ತೆರೆದಬಾಯಿಗೇ
ಕಾಲಿಡ್ತಿದ್ದೀಯಲ್ಲ - ಎಂದು ಕಿರುಚಿ ಹಿಡಿದೆಳೆದ,
ನೋಯುವ ರಟ್ಟೆ ಜೊತೆಗೆ ನೆನಪಿಗೆ ಬಂತು
ಆಟೋ ಆಸೆಬಿಟ್ಟು ಇಬ್ಬರೂ ನಡಕೊಂಡೇ ಹೊರಟದ್ದು.

ಅವನ ಮನಸ್ಸೂ ಭಾರವಾಯಿತು -
ಮಗಳ ಎಂಜನಿಯರಿಂಗ್ ಕೋರ್ಸ್‌ಗಾಗಿ
ಕಟ್ಟಬೇಕಿದ್ದ ಫೀಸಿನ ಹೊರೆ ನೆನೆದು
ಇವಳ ಚಪ್ಪಲಿಯನ್ನೂ ತೂರಿ ಬಂದ ಕಾರೇಮುಳ್ಳು
ಕಾಲುಚುಚ್ಚಿ ರಕ್ತ ಹರಿಸಿತು.

ಕೀಳಲಿಕ್ಕೆ ಒಂಟಿಗಾಲಲ್ಲಿ ಇವಳಸಾಹಸ
ಕಂಡಾಗ ಉಕ್ಕೇರಿತು ಅವನ ಕೋಪ
'ಕಣ್ಣು ಎಲ್ಲಿ ಇಟ್ಟು ನಡೀತಿದೀ ಇವತ್ತು'
ಎಂದು ಸಿಡುಕಿದ. ಹಿಂದೆ ಸರಿದ ಅವಳ ಮನಸ್ಸು ನೆನೆದದ್ದು
ಕುಮಾರ ವ್ಯಾಸನನ್ನು -

'ಎಳೆಯ ಬಾಳೆಯ ಸುಳಿಯು
ಅನಲಿನ ಝುಳದ ಹೊಯ್ಲಲಿ ನೊಂದವೋ -
ಉರೆ ಬಳಲಿದ ಬಲೆಯ ಕಂಡು '
ಮರುಗಲಿಕ್ಕೆ ಅವನೇನು ನಳನೃಪನೆ ?
ಅವಳೇನು ಅಬಲೆಯೆ ? ಆದರೂ
ಕವಿಗೆ ಥ್ಯಾಂಕ್ಸ್ ಹೇಳಿಕೊಂಡು ಮುಂದೆ ಸಾಗಿದಳು

- ಡಾ । ಬಿ.ಎಸ್. ಸುಮಿತ್ರಾಬಾಯಿ

ಮಹಿಳೆ, ಕಾರ್ಮಿಕ ಚಳುವಳಿಯ ಚಾಲಕ ಶಕ್ತಿಯಾಗಬಲ್ಲಳು

ಕಾಮ್ರೇಡ್ ಅಮರ್‌ಜಿತ್‌ಕೌರ್ ಅವರು ಎ.ಐ.ಟಿ.ಯು.ಸಿ ಕಾರ್ಮಿಕ ಸಂಘುಟನೆಯ ರಾಷ್ಟ್ರೀಯಕಾರ್ಯದರ್ಶಿ, ನ್ಯಾಶನಲ್, ಫೆಡರೇಷನ್ ಆಫ್ ಇಂಡಿಯನ್ ವಿಮೆನ್‌ನ ಉಪಾಧ್ಯಕ್ಷರು ಮತ್ತು ಆಲ್ ಇಂಡಿಯ ಅಂಗನವಾಡಿ ವರ್ಕರ್ಸ್ ಫೆಡರೇಷನ್‌ನ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿ ಚಳುವಳಿಯಿಂದ ಹಿಡಿದು ದೇಶದ ಪ್ರಮುಖ ಕಾರ್ಮಿಕ ಸಂಘುಟನೆಯ ಮುಖ್ಯ ಸ್ಥಾನದವರೆಗೆ ಅವರು ನಡೆದ ಹಾದಿ ಶ್ರಮದ್ದು. ಕೇವಲ ಸಂಘುಟಿತ ಕ್ಷೇತ್ರಕ್ಕಷ್ಟೇ ಸೀಮಿತವಾಗದೆ ಅಸಂಘುಟಿತ ಕ್ಷೇತ್ರದ ಅಂಗನವಾಡಿ ಕಾರ್ಯಕರ್ತೆಯರನ್ನು ರಾಷ್ಟ್ರಮಟ್ಟದಲ್ಲಿ ಸಂಘುಟಿಸಿರುವುದು ಆಕೆಯ ಸಾಧನೆಯಾಗಿದೆ. ಇತ್ತೀಚೆಗೆ NFIW ನವರು ನಡೆಸಿದ 'ಶ್ರಮಿಕ ಮಹಿಳೆ' ಕುರಿತ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿದ್ದರು. ಮಾನಸ ಓದುಗರಿಗಾಗಿ ಅವರೊಡನೆ ನಡೆಸಿದ ಮಾತುಕತೆಯನ್ನು ಇಲ್ಲ ಪ್ರಕಟಿಸಿದ್ದೇವೆ.

ಭಾರತೀಯ ಕಾರ್ಮಿಕ ಚಳುವಳಿಯಲ್ಲಿ ಮಹಿಳೆಯರು ವಹಿಸಿರುವ ಪಾತ್ರದ ಕುರಿತು ಹೇಳಿ.

ಭಾರತದಲ್ಲಿ ಟ್ರೇಡ್‌ಯೂನಿಯನ್ ಚಳುವಳಿ 19ನೇ ಶತಮಾನದಲ್ಲಿ ಪ್ರಾರಂಭವಾಯಿತು. ಈ ಚಳುವಳಿಯ ದೃಷ್ಟಿಕೋನವು ಸ್ವಾತಂತ್ರ್ಯ ಹೋರಾಟದಿಂದ ಪ್ರಭಾವಿತಗೊಂಡಿತ್ತು. 1905 ರಲ್ಲಿ ರಷ್ಯಾದಲ್ಲಿ ಲೆನಿನ್ ಹುಟ್ಟು ಹಾಕಿದ್ದ ಕ್ರಾಂತಿ ವಿಫಲಗೊಂಡಿತ್ತು. ಆ ಹಿನ್ನಲೆಯು ಭಾರತೀಯ ಕಾರ್ಮಿಕ ಚಳುವಳಿಯ ಮೇಲೆ ಪ್ರಭಾವ ಬೀರಿತ್ತು. 1919ರಲ್ಲಿ ಐ.ಎಲ್.ಓ (ಇಂಟರ್ ನ್ಯಾಶನಲ್ ಲೇಬರ್ ಆರ್ಗನೈಸೇಷನ್) ಆರಂಭವಾಯ್ತು. 1920 ಅಕ್ಟೋಬರ್ 31 ರಂದು ಎ.ಐ.ಟಿ.ಯು.ಸಿ (ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್) ಪ್ರಾರಂಭವಾಯ್ತು. ಆ ಸಂದರ್ಭದಲ್ಲಿ ಸಂಘುಟಿತ, ಅಸಂಘುಟಿತ ಕಾರ್ಮಿಕರೆಂಬ ವ್ಯತ್ಯಾಸವೇ ಇರಲಿಲ್ಲ. ಯಾವ ಉದ್ಯೋಗಕ್ಕೂ ಭದ್ರತೆ ಇರಲಿಲ್ಲ. ಬಟ್ಟೆಗಿರಣಿ ಕಾರ್ಮಿಕರು, ಸಣಬಿನ ಗಿರಣಿ ಕಾರ್ಮಿಕರು, ಸಫಾಯಿ ಕರ್ಮಚಾರಿಗಳು ಸಂಘುಟಿತರಾಗುತ್ತಿದ್ದರು, ಜಬ್ಬಲ್‌ಪುರ, ಬಾಂಬೆ, ಕಾನ್ಪುರಗಳಲ್ಲಿ ಶಿಕ್ಷಿತ, ಮಧ್ಯಮವರ್ಗದ ಮಹಿಳೆಯರು ಕಾರ್ಮಿಕರನ್ನು ಸಂಘುಟಿಸುವ ಕಾರ್ಯದಲ್ಲಿ ಸಕ್ರಿಯ ಪಾತ್ರವಹಿಸಿದರು. ಸ್ವಾತಂತ್ರ ಪೂರ್ವದಲ್ಲಿ ಕಾರ್ಮಿಕ ಸಂಘುಟನೆ ಕಾಯ್ದೆ, ಕೈಗಾರಿಕ ವಿವಾದ ಕಾಯ್ದೆ, ಕನಿಷ್ಟವೇತನ ಕಾಯ್ದೆಗಳು ಜಾರಿಗೊಂಡಿದ್ದು ಕಾರ್ಮಿಕ ಸಂಘುಟನೆಗಳ ಹೋರಾಟದಿಂದಾಗಿ. ಈ ಹೋರಾಟದ ನಾಯಕತ್ವ ವಹಿಸಿದ್ದು ಮಧ್ಯಮ ವರ್ಗದವರೆ, ಸ್ವಾತಂತ್ರ್ಯದ ನಂತರ ಮಹಿಳಾ ನಾಯಕತ್ವ ಕಡಿಮೆಯಾಯಿತು. ಉತ್ತಮ ಉದ್ಯೋಗಾವಕಾಶಗಳನ್ನು ಪಡೆದುಕೊಂಡ ಮಧ್ಯಮ ವರ್ಗದ ಮಹಿಳೆಯರಿಗೆ ಸ್ವಂತ ಹಿತಾಸಕ್ತಿಗಳೆ ಮುಖ್ಯವಾಗಿ ಹಿಂದೆ ಸರಿದರು. ಹಾಗಾಗಿ ನಾಯಕತ್ವ ಹೆಚ್ಚೆಚ್ಚು ಪುರುಷ ಕೇಂದ್ರಿತವಾಯಿತು. ಸಹಜವಾಗಿಯೇ ಮಹಿಳಾ ಪ್ರಶ್ನೆ ಮುಖ್ಯವಾಗಲಿಲ್ಲ. ಸಂಘುಟನೆಯ ಚಾರ್ಟರ್ ಆಫ್ ಡಿಮಾಂಡ್‌ನಲ್ಲಿ ಮಹಿಳಾ ನಾಯಕತ್ವ ಪ್ರಾಮುಖ್ಯತೆ ಪಡೆದು ಕೊಳ್ಳಲಿಲ್ಲ. ಕಾರ್ಮಿಕ ಸಂಘುಟನೆಗಳಲ್ಲಿ ಮಹಿಳೆ ಮತ್ತು ಪುರುಷರಿಬ್ಬರಲ್ಲಿನ ಮಧ್ಯಮವರ್ಗದ ಪ್ರಜ್ಞೆಯೂ ಸಹ ಹೋರಾಟದ ಬಿಗುವನ್ನು ಹಾಳುಗೆಡವಿತು.

ಹಲವಾರು ವರ್ಷಗಳಿಂದ ಕಾರ್ಮಿಕ ಚಳುವಳಿಯ ನಾಯಕತ್ವ ವಹಿಸಿದ್ದೀರಿ ಈ ಹಿನ್ನೆಲೆಯಲ್ಲಿ ನಿಮ್ಮ ಅನುಭವ ಕುರಿತು ಹೇಳಿ.

ನಾನು ಕಾರ್ಮಿಕ ಚಳುವಳಿಗೆ ಬರುವ ಮುಂಚೆಯೇ ಅಂದರೆ ವಿದ್ಯಾರ್ಥಿ ದೆಸೆಯಿಂದಲೆ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದೆ. ವಿದ್ಯಾರ್ಥಿ ಸಂಘುಟನೆಯಲ್ಲಿ ಕೆಲಸ ಮಾಡಿದ್ದೆ. ಎಡಪಂಥೀಯ ಕಾರ್ಮಿಕ ಸಂಘುಟನೆಗಳು ಮಹಿಳಾ ಚಳುವಳಿಯನ್ನು ಬೆಂಬಲಿಸುತ್ತವೆ. ಹಾಗೆಂದ ಮಾತ್ರಕ್ಕೆ ಲಿಂಗ ಸೂಕ್ಷ್ಮತೆಯಿದೆ, ಮಹಿಳಾ ನಾಯಕತ್ವ ಸುಲಭವೆಂದೇನೂ ಅಲ್ಲ ಸಂಘುಟನೆಯೊಳಗೆ, ಪಕ್ಷದೊಳಗೆ ಮಹಿಳಾ ಪ್ರಶ್ನೆಗಳಿಗೆ, ನಾಯಕತ್ವಕ್ಕೆ ಪ್ರತಿ ಸಭೆಯಲ್ಲೂ ಪಟ್ಟು ಬಿಡದೆ ಹೋರಾಡಿದ್ದೇವೆ. ಪಿತೃಪ್ರಧಾನ ಮೌಲ್ಯಗಳು ಆಳವಾಗಿ ಬೇರೂರಿವೆ. ಅಧಿಕಾರವನ್ನು ಅನುಭವಿಸುತ್ತ ಬಂದಿರುವ ಪುರುಷರು ಅದನ್ನು ಬಿಟ್ಟುಕೊಡಲು ಸುಲಭವಾಗಿ ಸಿದ್ಧರಿರುವುದಿಲ್ಲ. ಈ ಮೌಲ್ಯಗಳನ್ನು ನಾವೂ ಬೇರೂರಿಸಿಕೊಂಡಿದ್ದೇವೆ. ಅದನ್ನು ನಾವು ಬಿಡಬೇಕು. ನಿರಂತರ ಪ್ರಯತ್ನದಿಂದ ಸಮಾನತೆ ಸಾಧ್ಯ. ಮಹಿಳೆಯರ

ಪಾಲ್ಗೊಳ್ಳುವಿಕೆಯಿಂದ ಕಾರ್ಮಿಕ ಸಂಘಟನೆಗಳಲ್ಲಿ ಬದಲಾವಣೆ ಸಾಧ್ಯ. ನಿಜ ಹೇಳಬೇಕೆಂದರೆ ಗುಣಾತ್ಮಕ ಬದಲಾವಣೆ ಸಾಧ್ಯ. ಸಮಾನತೆಯಬಗ್ಗೆ, ಬದಲಾವಣೆ ಬಗ್ಗೆ ಎಷ್ಟೇ ಮಾತಾಡಿದರೂ ಪುರುಷರು ಸಲೀಸಾಗಿ ಮಹಿಳೆಯರ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾರೆ. ಮಹಿಳೆಯರಿದ್ದರೆ ಅಂತಹ ಮಾತಿಗೆ ಕಡಿವಾಣ ಬೀಳುತ್ತೆ, ಜಾಗರೂಕತೆಯಿಂದ ಮಾತನಾಡುತ್ತಾರೆ. ಎಷ್ಟೋ ಸಮಯ ಮಹಿಳೆಯರು ಸಭೆಗೆ ಬರುವುದಿಲ್ಲವೆಂಬ ಕಾರಣಕ್ಕೆ ಗಂಡಸರನ್ನು ಕುಡಿದು ಬರಬೇಡಿ ಎಂದು ಹೇಳಿದ್ದೇನೆ. ಹಾಗೆ ಹೇಳಿದ್ದು ಕೆಲಸ ಮಾಡಿದೆ.

ಮಹಿಳೆಯರು ಮಾನಸಿಕವಾಗಿ ಗಟ್ಟಿಗರು. ಅವರಿಗೆ ಜವಾಬ್ದಾರಿಯ ಪ್ರಜ್ಞೆ ಹೆಚ್ಚು. ಮಾಡುವ ಕೆಲಸಕ್ಕೆ ಬದ್ಧರಾಗಿರುತ್ತಾರೆ. ಮಧ್ಯಸ್ಥಿಕೆ, ಮನ ಒಲಿಸುವಿಕೆಯನ್ನು ಮಹಿಳೆಯರು ಸಮರ್ಥರಾಗಿ ಮಾಡುತ್ತಾರೆ. ಜಗಳಕ್ಕಿಳಿಯುವುದಿಲ್ಲ, ತಮ್ಮದೇ ಶ್ರೇಷ್ಠವೆಂದು ವಾದ ಮಾಡುವುದಿಲ್ಲ. ಇಂತಹ ಗುಣಗಳು Negotiating ಪ್ರಕ್ರಿಯೆಯಲ್ಲಿ ತುಂಬಾ ಮುಖ್ಯ. ಬೇಜವಾಬ್ದಾರರಲ್ಲದ ಕಾರಣ ಬಿಕ್ಕಟ್ಟಿನ ಸಂದರ್ಭದಲ್ಲೂ ಸ್ಥೈರ್ಯದಿಂದ ಕೆಲಸ ಮಾಡಬಲ್ಲರು. ಅವರ ಜೀವನಾನುಭವದಿಂದಲೇ ಹೆಚ್ಚು ಕಲಿತಿರುತ್ತಾರೆ. ಮಹಿಳೆಯರಿಗೆ ಬೇಕಿರುವುದು ಅವಕಾಶ ಮಾತ್ರ. ಕಾರ್ಮಿಕ ಸಂಘಟನೆಗಳಲ್ಲಿಯೂ ಮಹಿಳೆಯರಿಗೆ ಆಶ್ರಯದಾತರಾಗ ಬೇಕೆಂಬ ಮನೋಭಾವನೆ ಇದೆ. ನಾವು ನಮ್ಮ ಶಕ್ತಿಯ ಮೇಲೆ ಬೆಳೆಯಬೇಕು. ಕಾರ್ಮಿಕ ಸಂಘಟನೆಯ ಸ್ವರೂಪ ಮಹಿಳೆಯರಿಗೆ ಅವಕಾಶ ನೀಡುವಂತಿರಬೇಕು. ಮಹಿಳಾ ನಾಯಕತ್ವ ಕುರಿತು ಪುರುಷರಿಗಿರುವ ಕಲ್ಪನೆ ಬದಲಾಗಬೇಕು. ಕಾರ್ಮಿಕ ಸಂಘಟನೆಗಳಲ್ಲಿನ ಕೆಲಸ ಮಾಡುವ ಶೈಲಿವಿಧಾನಗಳು ಬದಲಾಗಬೇಕು. ಮಹಿಳೆಯರ ಸಮಸ್ಯೆಗಳನ್ನು ಗಮನದಲ್ಲಿಟ್ಟು -ಕೊಂಡು ಅವರ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಡ ಬೇಕು. ಮೀಟಿಂಗುಗಳಲ್ಲಿ ಮಹಿಳೆಯರು ಭಾಗವಹಿಸಲು ಮೀಟಿಂಗಿನ ಸಮಯವನ್ನು ಬದಲಾಯಿಸಬೇಕು.

ಮಹಿಳೆಯಾಗಿ ನೀವು ಸಮರ್ಥವಾಗಿ ನಿಭಾಯಿಸಿದ ಬಿಕ್ಕಟ್ಟಿನ ಸಂದರ್ಭ ಬಂದರ ಬಗ್ಗೆ ಹೇಳಿ

ಡಂಕಲ್ ಪ್ರಸ್ತಾವನೆಗೆ ಭಾರತ ಸರ್ಕಾರ ಸಹಿ ಮಾಡಿದ್ದರ ವಿರುದ್ಧ 1994 ರಲ್ಲಿ ಬೃಹತ್ ಪ್ರತಿಭಟನೆಯನ್ನು ದೆಹಲಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸುಮಾರು ಮೂರು ಲಕ್ಷ ಜನ ಸೇರಿದ್ದರು. ಪೋಲಿಸರು ಲಾಠಿ ಚಾರ್ಜ್ ಮಾಡಿದರು, ಆಶ್ರುವಾಯು ಬಳಸಿದರು, ಹಲವಾರು ನಾಯಕರು ಪರಿಸ್ಥಿತಿ ಎದುರಿಸಲಾರದೆ ಹೊರಟು ಹೋದರು, ನಾನು ಸೀದಾ ನುಗ್ಗಿ ಜನರು ಮತ್ತು ಪೋಲಿಸರ ನಡುವೆ ನಿಂತೆ, ಸಿಟ್ಟಿಗೆದ್ದ ಜನ ಒಂದು ಕಡೆ ಯುದ್ಧ ಮಾಡಲು ಸಿದ್ಧವಾಗಿ ನಿಂತ ಪೋಲಿಸು ಪಡೆ ಒಂದು ಕಡೆ. ಯಾರು ಒಂದು ಹೆಜ್ಜೆ ಮುಂದುವರೆಯಬಾರದೆಂದು ನಡುವೆ ನಿಂತೆ. ಪೋಲಿಸರೊಂದಿಗೂ ವಾದಿಸಿದೆ. ಜನರನ್ನು ನಿಯಂತ್ರಿಸಿದೆ. ಪರಿಸ್ಥಿತಿಯನ್ನು, ಫಯರಿಂಗ್ ಆಗುವುದರಿಂದ ತಡೆದೆ. ಗುಂಪು ಹಿಂಸಾತ್ಮಕವಾಗುತ್ತಿದೆ ಎಂದಾಗ ನಾನು ಸುಮ್ಮನೆ ನುಗ್ಗಿ ನಡುವೆ ನಿಂತು ಬಿಡುತ್ತೇನೆ.

ಕಾರ್ಮಿಕ ಚಳುವಳಿಯ ನಾಯಕತ್ವ ಜೊತೆಗೆ ಸಂಸಾರ - ಹೇಗೆ ನಿಭಾಯಿಸುತ್ತೀರಿ ?

ನಾನು ಮದುವೆಯಾಗಿ 24 ವರ್ಷಗಳಾಗಿವೆ. ಸಂಸಾರದ ಜವಾಬ್ದಾರಿಯಿಂದಾಗಿ ಒಂದು ಹಂತದಲ್ಲಿ ಬಹಳ ಸಂಕಷ್ಟ ಅನುಭವಿಸಿದೆ. ನನ್ನ ಗಂಡನು ಎಂಡ ಪಂಥೀಯರೇ. ನಾವಿಬ್ಬರು ಮದುವೆಯಾದಾಗ ಅತ್ತೆ ಮಾವಂದಿರು ಚಳುವಳಿಯ ಕೆಲಸಕ್ಕೆ ವಿರೋಧ ವ್ಯಕ್ತ ಪಡಿಸಿದರು. ಮಗುವಾದ ಮೇಲಂತೂ ರಾಜಕೀಯ ಜೀವನ ಬಿಡಲೇ ಬೇಕೆಂಬ ಒತ್ತಡವಿತ್ತು. ನಾನು ಬಿಡಲು ಸಿದ್ಧಳಿರಲಿಲ್ಲ. ಅತ್ತೆ ಮಾವಂದಿರ ಅಸಹಕಾರದಿಂದಾಗಿ ಮಗುವಿನ ಜವಾಬ್ದಾರಿ ನಿಭಾಯಿಸುವುದು ಕಷ್ಟವಾಯಿತು. ದೆಹಲಿ ನನ್ನ ಕೆಲಸದ ಸ್ಥಳವಾಗಿತ್ತು. ವಕೀಲರಾಗಿದ್ದ ನನ್ನ ಗಂಡ ಲೂಧಿಯಾನದಲ್ಲಿ ಪ್ರಾಕ್ಟಿಸ್ ಮಾಡುತ್ತಿದ್ದರು. ನನ್ನ ತಾಯಿ ನನ್ನೊಡನೆ ಬಂದಿದ್ದು ಸಹಾಯ ಮಾಡಿದರು. ಲೂಧಿಯಾನ ದೆಹಲಿ ನಡುವೆ ನನ್ನ ಬದುಕು ಹಂಚಿ ಹೋಗಿತ್ತು.. ದೂರದ ಓಡಾಟ ಕಡಿಮೆ ಮಾಡಿಕೊಂಡು ದೆಹಲಿಯನ್ನೆ ಕೇಂದ್ರ ಮಾಡಿಕೊಂಡು ಕೆಲಸ ಮಾಡಿದೆ. ಅತ್ತೆ ಮಾವಂದಿರೊಂದಿಗೂ ಜಗಳ ಮಾಡಿಕೊಳ್ಳಲಿಲ್ಲ. ಉತ್ತಮ ತಾಯಿ, ಪತ್ನಿ, ಸೊಸೆಯಾಗುವುದರ ಜೊತೆಗೆ ಚಳುವಳಿಯ ಜವಾಬ್ದಾರಿಯೂ ನನಗೆ ಮುಖ್ಯವಾಗಿತ್ತು. ನಿಜಕ್ಕೂ ಅತ್ಯಂತ ಬಿಕ್ಕಟ್ಟಿನ, ಸವಾಲಿನ ಅವಧಿಯಾಗಿತ್ತು. ಅತ್ಯಂತ ತಾಳ್ಮೆಯಿಂದ ನಿಭಾಯಿಸಿದೆ. ಇಚ್ಛೆ ಇದ್ದರೆ, ನಾನು ಮಾಡುತ್ತಿರುವುದು ಸರಿ ಎಂಬ ದೃಢ ನಿಶ್ಚಯವಿದ್ದಾಗ ಮಾತ್ರ ನಿಭಾಯಿಸಲು ಸಾಧ್ಯ. ಸಾಮಾನ್ಯವಾಗಿ ಸಾರ್ವಜನಿಕ ಜೀವನದಲ್ಲಿರುವ ಮಹಿಳೆಯರು ಸಂಸಾರಕ್ಕೆ ಮಕ್ಕಳಿಗೆ ಮನ ನೀಡಲಿಲ್ಲವೆಂದು ಪಾಪ ಪ್ರಜ್ಞೆ ಅನುಭವಿಸುತ್ತಾರೆ. ಮೊದಲು ಅದರಿಂದ ಹೊರಬರಬೇಕು.

ಮಹಿಳಾ ಪ್ರಶ್ನೆ ಕುರಿತು ತಮ್ಮ ನಿಲುವು ಏನು ?

ಪಿತೃ ಪ್ರಧಾನತೆ ಎಂಬುದು ಹೆಣ್ಣುಗಂಡಿಗಷ್ಟೇ

ಸೀಮಿತವಾಗುವುದಿಲ್ಲ. ಪಿತೃ ಪ್ರಧಾನತೆ ಎಂಬುದು ಶ್ರೇಣೀಕರಣ ಮತ್ತು ಅಧಿಕಾರಕ್ಕೆ ಸಂಬಂಧಪಟ್ಟಿದ್ದು ಆಗಿದೆ. ಪಿತೃಪ್ರಧಾನತೆಯ ಮೌಲ್ಯಗಳನ್ನ ಪುರುಷ ಮಹಿಳೆಯರಿಬ್ಬರೂ ಮೀರ ಬೇಕಾಗಿದೆ. ಮಹಿಳೆಯರ ಸಮಸ್ಯೆ ಮಹಿಳೆಯರ ತಲೆಬೇನೆಯಷ್ಟೇ ಅಲ್ಲ ಅದು ಸಮಾಜದ ತಲೆ ಬೇನೆ, ರಾಷ್ಟ್ರದ ತಲೆಬೇನೆ, ಒಂದು ದೇಶದ ಅಭಿವೃದ್ಧಿಯನ್ನು 40-50 ಅಡಿ ಬಿಲ್ಡಿಂಗ್‌ಗಳಿಂದ ಅಳೆಯಲು ಸಾಧ್ಯವಿಲ್ಲ. ಮಹಿಳೆಯರ ದಾಸ್ಯ ಅಭಿವೃದ್ಧಿಯನ್ನು ಸಂಕೇತಿಸುವುದಿಲ್ಲ. ಎಲ್ಲರಿಗೂ ಅನ್ನ, ಶಿಕ್ಷಣ, ಉದ್ಯೋಗ, ನೀರು, ಆರೋಗ್ಯ, ಶೌಚಾಲಯ, ಮಹಿಳೆಯರ ಸ್ಥಾನಮನ ಮಕ್ಕಳ ಭವಿಷ್ಯವೇನು ಎಂಬ ಆಧಾರದ ಮೇಲೆ ಅಭಿವೃದ್ಧಿಯನ್ನು ಅಳೆಯಬೇಕು.

ಸಮಾಜದಲ್ಲಿರುವ ಹಿಪಾಕ್ರಸಿ ಹೋಗಬೇಕು. ಹೆಂಗಸರನ್ನು ದುರ್ಗಿಯೆಂದು ಪೂಜಿಸುತ್ತಾರೆ, ನಿಜ ಜೀವನದಲ್ಲಿ ದುರ್ಗಿಯಾದರೆ ಅವಹೇಳನ ಮಾಡುತ್ತಾರೆ. ನಾವು ದೇವಿಯರಾಗುವುದು ಬೇಡ. ಹಸಿವು, ನಿದ್ದೆ, ಭಾವನೆ ಪ್ರೀತಿ ಇರುವ ಮನುಷ್ಯರಾಗೋಣ. ಸಮಾಜವು ನಮ್ಮನ್ನು ಮನುಷ್ಯರೆಂದು ನೋಡಲಿ, ನಮಗೆ ಬೇಕಾಗಿರುವುದು ಅವಕಾಶ. ನಮ್ಮ ಸಂಪಾದನೆಯನ್ನು ಬಳಸಲು ನಮಗೆ ಹಕ್ಕಿರಬೇಕು. ನಾವು ಗಂಡಸರಿಗಿಂತ ಶ್ರೇಷ್ಠರಾಗಬೇಕೆಂದು ಬಯಸುವುದಿಲ್ಲ, ನಾವು ಬಯಸುವುದು ಸಮಾನತೆಯನ್ನು. ಮಹಿಳೆಯರಿಗೆ ಸಮಾಜದಲ್ಲಿ ಘನತೆಯ ಸ್ಥಾನಮಾನ ಬೇಕು. ಅದಕ್ಕಾಗಿ ಹೆಂಗಸರಷ್ಟೇ ಅಲ್ಲ ಸೂಕ್ಷ್ಮತೆಯುಳ್ಳವರೆಲ್ಲರೂ ಹೋರಾಡಬೇಕು.

ಜಾಗತೀಕರಣದ ಹಿನ್ನೆಲೆಯಲ್ಲಿ ಮಹಿಳೆಯರ ಸಮಸ್ಯೆಯನ್ನು ಹೇಗೆ ನೋಡುತ್ತೀರಿ ?

ಜಾಗತೀಕರಣದಿಂದಾಗಿ ಮಹಿಳೆಯ Commodification ಹೆಚ್ಚಾಗಿದೆ. ಲಾಭಕೋರ ಮಾರುಕಟ್ಟೆಯ ಆರ್ಥಿಕತೆಯಲ್ಲಿ ಮಹಿಳೆಯು ಮಾರಾಟದ ಸರಕಾಗಿದ್ದಾಳೆ. ಸಂಬಂಧವಿಲ್ಲದ ವಸ್ತುಗಳ ಮಾರಾಟಕ್ಕೆ ಮಹಿಳೆಯರು ಬಳಕೆಯಾಗುತ್ತಿದ್ದಾರೆ. ಜಾಗತೀಕರಣದ ಪ್ರಕ್ರಿಯೆಯು ಮಹಿಳಾ, ದಲಿತ, ಕಾರ್ಮಿಕ, ಬಡ ಜನರ ವಿರೋಧಿಯಾಗಿದೆ. ನಾವು ವಿರೋಧಿಸಬೇಕಾಗಿರುವುದು ಆಕ್ರಮಿಸಿಕೊಂಡು, ಗುಲಾಮರನ್ನಾಗಿಮಾಡಿ ಲೂಟಿಮಾಡುವ ಸಾಮ್ರಾಜ್ಯಶಾಹಿ, ವಸಾಹತು ಶಾಹಿ ಜಾಗತೀಕರಣವನ್ನು. ಪರಸ್ಪರ ಸಹಕಾರ, ತಂತ್ರಜ್ಞಾನದ ಕೊಂಡು - ಕೊಳ್ಳುವಿಕೆ, ಪರಸ್ಪರ ಅರಿವು, ಜ್ಞಾನ ಹಂಚಿಕೊಳ್ಳುವಂತಹ ಜಾಗತೀಕರಣ ಸ್ವಾಗತಾರ್ಹ. ಈ ಅರ್ಥದಲ್ಲಿ ಜಗತ್ತಿನ ಕಾರ್ಮಿಕರೆ ಒಂದಾಗಿ ಎಂಬುದು ಅಂತರಾಷ್ಟ್ರೀಯತೆಯ ಸಂಕೇತವಾಗುತ್ತೆ.

ಸಂಘಟಿತ, ಅಸಂಘಟಿತ ಎರಡೂಕ್ಷೇತ್ರದ ಕಾರ್ಮಿಕರ ನಾಯಕತ್ವ ವಹಿಸಿದ್ದೀರಿ. ಅನುಭವ ಖಂಡಿತವಾಗಿಯೂ ಭಿನ್ನವಾಗಿರಬಹುದು, ಆ ಭಿನ್ನತೆ ವಿಶೇಷತೆಗಳೇನು ?

ಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರ ಸಂಘಟನೆ ಸುಲಭ. ಅದಕ್ಕೆ ಮುಖ್ಯಕಾರಣ ಅವರು ಒಂದೇ ಕಡೆ ಕೆಲಸ ಮಾಡುತ್ತಾರೆ. ಆದರೆ ಸಂಘಟಿತ ಕ್ಷೇತ್ರದಲ್ಲಿನ ಮಹಿಳೆಯರಲ್ಲಿ Militancy ಬಹಳ ಕಡಿಮೆ. ತಮ್ಮ ಸಮಸ್ಯೆಗಷ್ಟೆ ಸ್ಪಂದಿಸುತ್ತಾರೆ. Larger issue ಗೆ ಸ್ಪಂದಿಸುವುದೇ ಇಲ್ಲ. ಅಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರನ್ನು ಸಂಘಟಿಸುವುದೇ ಒಂದು ಸವಾಲು. ಈ ಕ್ಷೇತ್ರದ ಹೆಂಗಸರು Militant ಆಗಿರುತ್ತಾರೆ. ತಮ್ಮ ಹಾಗೂ larger issue ಗಳೆರೆಡಕ್ಕೂ ತೀವ್ರವಾಗ ಸ್ಪಂದಿಸುತ್ತಾರೆ.

ಕಾರ್ಮಿಕ ಸಂಘಟನೆಗಳು ಜಾತಿ ಪ್ರಶ್ನೆಯನ್ನು ಅಲಕ್ಷಿಸಿವೆ, ನಿಮ್ಮ ಪ್ರತಿಕ್ರಿಯೆ ಏನು ?

ಕಾರ್ಮಿಕ ಕ್ಷೇತ್ರದಲ್ಲಿ caste association ಗಳು ಪ್ರಾರಂಭವಾದದ್ದು ಕಾರ್ಮಿಕ ಸಂಘಟನೆಗಳಿಗೆ ದೊಡ್ಡ ಪೆಟ್ಟನ್ನು ನೀಡಿತು. ಇದಕ್ಕೆ ಕಾರಣ ಕಾರ್ಮಿಕ ಸಂಘಟನೆಗಳು ಜಾತಿ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿಲ್ಲದಿದದ್ದು.

ಈಗ ಜಾತಿ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸುವ ಪ್ರಯತ್ನಗಳಾಗುತ್ತಿವೆ. ಸಧ್ಯದ ಪರಿಸ್ಥಿತಿಯಲ್ಲಿ, ಎಲ್ಲರ ನಡುವಿನ Networking ಬಹಳ ಮುಖ್ಯ. ಭಿನ್ನಾಭಿಪ್ರಾಯಗಳಾಚೆ ಒಟ್ಟಿಗೆ ಕೆಲಸ ಮಾಡುವಂತಹ ವಿಷಯಗಳನ್ನು ಪರಿಗಣಿಸಬೇಕು. ನ್ಯಾಯ ಸಮಾನತೆ ಮತ್ತು ಎಲ್ಲರ ಹಸಿವನ್ನು ನೀಗಿಸುವಂತಹ ಅಭಿವೃದ್ಧಿ ಅಗತ್ಯವಿದೆ. Employment guarantee bill ನಂತಹ ವಿಷಯಗಳಿಗಾಗಿ ಎಲ್ಲರು ಒಟ್ಟಾಗಿ ಎದುರಿಸಬೇಕು. ಯಾವುದನ್ನು ನಿರಾಕರಿಸಬೇಕು, ಅಪ್ಪಿಕೊಳ್ಳಬೇಕೆಂದು ನಿರ್ಣಯಿಸುವ ಹಕ್ಕು ಜನರಿಗಿರಬೇಕು. ಜನಾದೇಶಕ್ಕೆ ಬೆಲೆ ಸಿಗುವಂತಾಗಬೇಕು. ಗುಲಾಮಿ ಸಮಾಜ ಹಕ್ಕುಗಳನ್ನು ಕಳೆದುಕೊಳ್ಳುತ್ತದೆ. ಒಳಗಿನ, ಹೊರಗಿನ ಅಪಾಯ, ಸವಾಲುಗಳನ್ನು ಎದುರಿಸುವ ಕ್ರಿಯಾಶಾಲಿ ಸಮಾಜ ನಮ್ಮದಾಗಬೇಕು. ಆ ನಿಟ್ಟಿನಲ್ಲಿ ಎಲ್ಲಾ ಜನಪರ ಹೋರಾಟಗಳು ಒಂದುಗೂಡುವ ಅಗತ್ಯವಿದೆ.

ಸರಸ್ವತಿ ದು.

'ವೆನ್ನೆಲ ದೊರಸಾನಿ'

ವೆನ್ನೆಲ ದೊರಸಾನಿ

ಕೇಶವ ಮಳಗಿ

ಕಥನ ಪ್ರಕಾಶನ

ಬೆಲೆ : ರೂ 110

ಸುಮಾರು ಹದಿನಾರು ವರ್ಷಗಳ ಕಾಲ ಕಥೆಗಾರ ಕೇಶವ ಮಳಗಿ ಬರೆದಿರುವ ಹಲವಾರು ಕಥೆಗಳ ಪೈಕಿ ಹನ್ನೆರಡು ಕಥೆಗಳನ್ನು ಆಯ್ದು ಪ್ರಕಟಿಸಿದ ಸಂಕಲನ 'ವೆನ್ನಲ ದೊರಸಾನಿ' ಈ ಸಂಕಲನದ ಬಹುಪಾಲು ಕಥೆಗಳು ಸ್ತ್ರೀಕೇಂದ್ರಿತವಾದವು. ಆ ಪಾತ್ರಗಳ ಆಂತರಿಕ ತೊಳಲಾಟವೇ ಸಂಕಲನದ ಪ್ರಧಾನ ಭಿತ್ತಿ. ಈ ಸಂಕಲನದ ಹನ್ನೆರಡು ಕಥೆಗಳಲ್ಲಿ, ಮೊದಲ ಏಳು ಕಥೆಗಳು ಸ್ತ್ರೀಸಂವೇದನೆಯ ನಲೆಗಟ್ಟಿನಿಂದ ಹುಟ್ಟಿದ್ದರೆ ನಂತರದ ಐದು ಕಥೆಗಳು ಪುರುಷ ಸಂವೇದನೆಯ ನೆಲೆಗಟ್ಟಿನಿಂದ ಹುಟ್ಟಿರುವ ಕಥೆಗಳು ನಿರುದ್ದಿಷ್ಯ ಎನ್ನಿಸುವುದಿಲ್ಲ.

ಮೊದಲ ಏಳು ಕಥೆಗಳಲ್ಲಿ ಬರುವ ಜಾಲಿಬೆಂಚಿ, ಇಂದುಮುಖಿ ಸುರಹೊನ್ನೆ. ಅವ್ವಿ, ಹಶಂಬೀ, ಮಾಧವಿ, ತುಂಗಭದ್ರೆ ಹಾಗೂ ಮಾಳವ್ವ ಒಂದೇ ದಾರದಲ್ಲಿ ಪೋಣಿಸಿದ ಪಾತ್ರಗಳಾಗಿ ಬದುಕಿನ ನಿಗೂಢತೆ,'ನಿಷ್ಫಲತೆಯ' ನಡುವೆಯೂ ಅದರ ಅರ್ಥ ಅರಸುವಿಕೆಯ ಪ್ರತೀಕಗಳಾಗಿ ಕಂಡರೆ, ನಂತರದ ಐದು ಕಥೆಗಳಲ್ಲಿ ಬರುವ ಮಧುಕರ, ಮಿಲಿಂದ, ಕಿಶೋರ ಹಾಗೂ ಅಚ್ಯುತ ಮುಂತಾದ ಪಾತ್ರಗಳು ; ಸಂಬಂಧಗಳಲ್ಲಿನ ತೊಡಕು, ದೂರವಿರುವುದನ್ನು ಪ್ರಯಾಸದಿಂದ ಕರಗತ ಮಾಡಿಕೊಳ್ಳುವುದು, ಬೇರುಗಳ ತಾಕಲಾಟ, ನಗರ 'ಊರ'ಗಳ ನಡುವಿನ ಸೆಣಸಾಟ ಹಾಗೂ ಅನಾಥಪ್ರಜ್ಞೆಗಳಿಂದ ನರಳುತ್ತವೆ. 'ಮಾತು ಯಾತನೆಯ ದಿಡ್ಡಿಬಾಗಿಲು' ಕಥೆಯ ನಾಯಕಿ ನಿಹಾರಿಕೆ ನಾಯಕನನ್ನು ಕೇಳುತ್ತಾಳೆ, 'ಮಿಲಿಂದ, ಎಲ್ಲ ಸರಿ, ನೀನ್ಯಾಕೆ ಅಷ್ಟೊಂದು ಭಾವುಕನಾಗಿ ಬರೀತಿಯಾ ? ನಿನ್ನ ಕಥೆಗಳು ಹಳೆಯ ಹಿಂದಿ ಕಮರ್ಷಿಯಲ್ ಸಿನಿಮಾಗಳಂತೆ ಇರುತ್ತವೆ."

ನಿಹಾರಿಕೆಯ ಈ ಮಾತಿನಂತೆ ಈ ಸಂಕಲನದ ಕೆಲವು ಕಥೆಗಳು ಭಾವುಕತೆಯ ಭಾರಿದಿಂದ ನಲಗುತ್ತವೆ. ಬಯಲು ಸೀಮೆಯ ಬಿಸಿಲು, ಧಗೆ, ಗಾಳಿ, ಬೆಳಕುಗಳು ರೂಪಿಸಿರುವ ಕಥೆಗಾರ ಕೇಶವ ಮಳಗಿ ಭಾವುಕತೆಯನ್ನೇ ತಮ್ಮ ಕಥಾನಕದ ಪ್ರಧಾನ ಭಿತ್ತಿಯಾಗಿಸಿಕೊಂಡ ಬರಹಗಾರರ ಪೈಕಿ ಪ್ರಮುಖರು. ಹಾಗಾಗಿ ಇಲ್ಲಿನ ಕಥೆಗಳು ಭಾವುಕ ಮನಸ್ಸು. ಮನುಷ್ಯ ಸಂಬಂಧಗಳನ್ನು ಅತಿಸೂಕ್ಷ್ಮವಾಗಿ, ಆದರೆ ಚೆಲವು ಕೆಡದಂತೆ ತೆರದಿಡುವಲ್ಲಿ ಯಶಸ್ವಿಯಾಗಿವೆ. ಗಂಡು ಹೆಣ್ಣುಗಳ ನಡುವಿನ ಸಂಬಂಧದ ಸಂಕೀರ್ಣತೆಯನ್ನು ತೆರದಿಡುವ ಜೊತೆಜೊತೆಗೇ 'ಹೊಂದಿಕೊಂಡು ಹೋಗಬೇಕಾದ ಅನಿವಾರ್ಯತೆಯನ್ನು ಭಾವುಕತೆಯ ಎಲ್ಲ ತೀವ್ರತೆಗಳೊಂದಿಗೆ ಬಿಚ್ಚಿಡುತ್ತದೆ.

ತೀವ್ರ ಭಾವುಕತೆಯ ಬೆನ್ನಿನಲ್ಲಿಯೇ, ಅಷ್ಟೇ ತೀವ್ರವಾದ ಎಲ್ಲವನ್ನೂ ಕಳೆದುಕೊಳ್ಳುವ ಲೋಕಳಿಕ ಭಾವದ ನಿರುಮ್ಮಳ ಸ್ಥಿತಿಯನ್ನು ಕಥೆಆಳೂಗರ ಮಳಗಿ ತಮ್ಮ ಕಥನ ಶೈಲಿಯಲ್ಲಿ ಸಾಧಿಸಿದ್ದಾರೆ.

ಈ ಹಿಂದೆ 'ಜಾಲಿಬೆಂಚಿ'ಯಾಗಿ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಕಥೆ ಈ ಸಂಕಲನದಲ್ಲಿ 'ವೆನ್ನೆಲ ದೊರಸಾನಿ'ಯಾಗಿದೆ. ಕಾಡು ಹೂವಿನಂಥ ಬೇಡರ ಜಾತಿಯ ಹೆಣ್ಣು ಚಿನ್ನಲಕ್ಷ್ಮಮ್ಮ; ಜಾಲಿಬೆಂಚಿಯಾದ ಕಥೆಯಲ್ಲಿ ಹಿಂಸೆ ತಣ್ಣಗೆ ಸದ್ದಿಲ್ಲದೆ ಹರಿಯುತ್ತದೆ. ಗಿಚ್ಚಲು ಜೊತೆಗೆ ಓಡಿ ಬಂದು ಸರಗುಕಟ್ಟಿ ಕಮ್ಮಾರೆಡ್ಡಿಗಳ ಜೊತೆಗೆ ಸರಿಸಮ ಸಣಸಾಡಿ, ಸರಾಯಿದಂಥೆ ಕಟ್ಟುವ ಜಾಲಿಬೆಂಚಿ, ಒಂದು ಗಳಾಸು ಶರಾಬು, ಒಂದು ತುಣುಕುಕೋಳಿ ಊಟಕ್ಕೆ ಹೊಡೆದಾಡುವ ಹೆಣ್ಣು ಮಗಳು. ಬೆಳ್ಳಿ ಬಂಗಾರಕ್ಕೆ ಆಸೆ ಪಡದೆ ಕೋಟೆಯಂಥ ಮನೆ ಕಟ್ಟದೆ, ಬಂದದ್ದನ್ನು ಬಗಲಲ್ಲಿದ್ದವರಿಗೆ ಹಂಚಿ ಜನರ ವಿಶ್ವಾಸದ ಅಬೇಧ್ಯ ಕೋಟೆ ಕಟ್ಟುವುದು ಗಿಚ್ಚಲುವಿನ ಪ್ರೀತಿಗಾಗಿ. ಆದರೆ ಗಿಚ್ಚಲುವಿನ ಕ್ರೌರ್ಯ ದಿಂದಲೇ ಜಾಲಬೆಂಚಿ ಕೊಲೆಯಾದಾಗ. ಹುಟ್ಟುವುದು ವಿಷಾದದ ಛಾಯ.

ಬಯಲು ಸೀಮೆಯ ರಣಗುಡುವ ಬಿಸಲಿನಿಂದ ಹುಟ್ಟುವ ರಕ್ತದ ಹಪಾಹಪಿತನ ಹಾಗೂ ಬದುಕಿಗಾಗಿ ಸೆಣಸಾಡುವ ಈ ಕಥೆಯನ್ನು ಕಥಿಸಿರುವ ಶೈಲಿಯಲ್ಲೇ ಹೊಸತನವಿದೆ. ಇದಕ್ಕೆ ತೆಲುಗು ಮಿಶ್ರಿತ ಕನ್ನಡ ಬೆನ್ನೆಲುಬಾಗಿ ನಿಂತು ಸಹಕರಿಸುತ್ತದೆ.

'ಅಗಮ್ಯ, ಅಗೋಚರ, ಅಪ್ರತಿಮ ಜೀವವೇ'- ಒಂದು ಸ್ವಚ್ಛಂದ ಬದುಕಿನ ಅರ್ಥ ಅರಸಿ ಹೊರಡುವ ನಾಯಕಿ ಇಂದುಮತಿ ಸುರಹೊನ್ನ ಸಾವಿನಲ್ಲಿ ಅಂತ್ಯಗೊಳ್ಳುವ ಕಥೆ. ಬದುಕಿಗೆ ಯಾರ ಭಾಷ್ಯ ಬೇಕಿಲ್ಲ. ಹಾಗೆಯೇ ಸಾವಿಗೆ ಯಾರ ಸಾಂತ್ವನ ಟೊಳ್ಳು ಭರವಸೆಯೂ ಬೇಡ ಎಂದು ತನಗೆ ಬೇಕಿದ್ದಂತೆ ಬದುಕಿ, ಯಾವ ಪಾಪಪ್ರಜ್ಞೆಯೂ ಇಲ್ಲದೆ ಮಲಗಿ ದಂತೆಯೇ ಎದ್ದು ಹೋದ ಇಂದುಮುಖಿ ಸುರ ಹೊನ್ನ ಸಂಬಂಧಗಳ ಅರ್ಥ ಹೀನತೆಗೊಂದು ವ್ಯಾಖ್ಯಾನ.

'ಕಾನುಮನೆ' ; 'ಅನ್ಯ' ನೆಲದಲ್ಲಿ ಸಮೃದ್ಧಿ ಇದ್ದರೂ, ತನ್ನ ನೆಲದ ಸಳೆತವನ್ನು ಶಕ್ತಿಯುತವಾಗಿ, ಆದರೆ ಘೋಷಣಾತ್ಮಕವಾಗದಂತೆ

ಅವ್ವಿ, ಗುನ್ನಿ, ಅತ್ತಿ, ಗಿಚ್ಚಮಾವ ಹಾಗೂ ಪರಷ್ಯಣ್ಣರ ಮೂಲಕ ಬಿಚ್ಚಿಕೊಳ್ಳುತ್ತದೆ. ಅವ್ವಿ 'ದೊಡ್ಡವಳಾದಾಗ' ಹೊಸ ಲೋಕ ತೆರೆದುಕೊಂಡಂತೆಯೇ. 'ಪರ' ನೆಲದಲ್ಲಿ ಕಾಡುವ ಭಯ ಹಾಗೂ ಅವಳನ್ನು ಕಾಡುವ ನಿಗೂಢತೆಯಂತೆಯೇ ಆಕೆ ಕಾನುಮನೆಯ ನಿಗೂಢ ಪ್ರಕೃತಿಯಲ್ಲಿ ಕಾಣೆಯಾಗುವುದು ಹಲವು ಅರ್ಥಗಳನ್ನು ಧ್ವನಿಸುತ್ತದೆ 'ಕೆಂಪು ಮಣ್ಣಿನ ಒಕ್ಕಲು' - ಹಶಂಬೀ ಬದುಕಿಗಾಗಿ ನಡೆಸುವ ಏಕಾಂಗಿ ಹೋರಾಟವನ್ನು ಕಟ್ಟಿ ಕೊಡುತ್ತಲೇ, ಅರ್ಥವಾಗದ ಅಥವ ಅರ್ಥ ಹಚ್ಚಲಾಗದ ಸಂಬಂಧಗಳನ್ನು ಯಶಸ್ವಿಯಾಗಿ ಶೋಧಿಸುತ್ತದೆ. ಪಾತ್ರಗಳ ಮನೋಧರ್ಮದ ಮೂಲಕ ಸಮಾಜನ ವಿಭಿನ್ನವರ್ಗಗಳ ಮೌಲ್ಯಗಳನ್ನು ಪರಿಶೀಲಿಸುತ್ತದೆ. ಬಳ್ಳಾರಿಯ ಶಕ್ತ ಉರ್ದುಮಿಶ್ರಿತ ಭಾಷೆ, ಕಥೆಯ ಒಟ್ಟಂದವನ್ನು ಹೆಚ್ಚಿಸುತ್ತದೆ. ಹಶಂಬೀ-ದಾವೂದರ ನಡುವಿನ ಅರ್ಥ ಹಚ್ಚಲಾಗದ ಸಂಬಂಧಗಳನ್ನು ಚಿತ್ರಿಸುವಾಗ, ಆಕೆಯಗಂಡ ಕಾಶೀಮನನ್ನು ಖಳನಾಯಕನನ್ನಾಗಿಸದೆ. ಮನುಷ್ಯಸಹಜವಾದ ಅನುಮಾನ, ಈರ್ಷ್ಯೆಗಳೊಂದಿಗೆ ರಕ್ತಮಾಂಸಗಳುಳ್ಳ ಮನುಷ್ಯನಂತೆ ಚಿತ್ರಿಸಿರುವುದರಲ್ಲಿ ಕಥೆಯ ಯಶಸ್ಸಿದೆ. ಆಸೆಗಳ ಮೂಟೆ ಹೊತ್ತ **'ಉರೂಸ್'ನ ಪಯಣ** ಇಲ್ಲಿ ಕನಸು-ಭ್ರಮೆಗಳ ಮೇಲೋಗರ. 'ಯಾರಿಲ್ಲಿಗೆ ಬಂದರು ಕಳೆದಿರುಳು' ; ಮಾಧವಿಯ - ಮಗು ಮತ್ತು ತಾಯಿಯ ನಡುವಿನ ಆಯ್ಕೆಯ ಕ್ಲಿಷ್ಟತೆಯ ಜೊತೆಗೆ, ನಿಷ್ಕಾರುಣ ಆತಂಕವನ್ನು ಕನವರಿಕೆಯ ಸ್ಥಿತಿಯಲ್ಲಿ ಮುಖಾಮುಖಿ-ಯಾಗಿಸುತ್ತದೆ. ತನ್ನ ಭಾವುಕ ಗುಣದಿಂದಾಗಿ ಈ ಕಥೆ ತನ್ನ ಶೃತಿಯನ್ನು ಕಳೆದುಕೊಂಡಂತೆ ಭಾಸವಾಗುತ್ತದೆ. ಅದ್ಭುತ ಬರವಣಿಗೆ ಇದ್ದೂ ಒಟ್ಟಂದದಲ್ಲಿ ಕಥೆ ತುಸು ಚಪ್ಪಟೆಯಾಗಿ ಬೇರೆಯಾವುದೋ ಆಯಾಮವನ್ನು ಕಳೆದುಕೊಂಡಂತೆ ಅನ್ನಿಸುತ್ತದೆ.

'ಸೌಭಾಗ್ಯವತಿ' ಒಂದು ಸರಳ ರೇಖೆಯಂಥ ಕಥೆ. ಏಕಾಗಿಯಾಗಿ ಬದುಕನ್ನು ಎದುರಿಸುವ ತುಂಗಭದ್ರೆಯ ತ್ಯಾಗಮಯ ಜೀವನ ಇದುವರೆಗೆ ಬಂದಿರುವ ಹಲವು ಕಥೆಗಳ ಪೈಕಿ ಒಂದಾಗಿ ಬಿಡುತ್ತದೆ. ಕುಟುಂಬವನ್ನು ಚಿತ್ರಿಸುವಾಗಿನ ಸೂಕ್ಷ್ಮತೆ, ಪ್ರತಿ ವ್ಯಕ್ತಿ ಖಾಸಗಿ ಬದುಕನ್ನು ನೋಡುವಾಗ 'ತೀರಾ' ಸರಳವಾಗಿ ಬಿಡುತ್ತದೆ. ಇಂಥ ಹರಹಿನ ಕಥೇ ಸಾಕಷ್ಟು ಬಂದಿದ್ದು ಹೊಸದೇನನ್ನೂ ಹೇಳುವುದಿಲ್ಲ

'ನಕ್ಷತ್ರ ಯಾತ್ರಿಕರು' ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ 'ರಂಗನಾಯಕಿ' ಚಿತ್ರದಂಥ ಕಥೆ. ವೃತ್ತಿ ರಂಗಭೂಮಿ ಬದುಕಿನ ಎಲ್ಲ ಆಯಾಮಗಳನ್ನು ಶೋಧಿಸುತ್ತಲೇ ಅದರಲ್ಲಿನ ಈರ್ಷ್ಯೆಯನ್ನು ಸೂಕ್ಷ್ಮವಾಗಿ ಆದರೆ ಶೋಷಣೆಯನ್ನು ಧ್ವನಿಪೂರ್ಣವಾಗಿ ಹೇಳುವ ಪ್ರಯತ್ನ ಈ ಕಥೆಯದು. ದಾರಿತಪ್ಪಿಸಿಕೊಂಡು ನಾಟಕದ ಕಂಪನಿ ಸೇರುವ ಮಾಳವ್ವನ ಬದುಕಿನ ಏರಿಳಿತಗಳನ್ನು ಚಿತ್ರಿಸುತ್ತ, ಅಂತಿಮವಾಗಿ ಜಾತ್ರೆಯಲ್ಲಿ ನರ್ತಿಸುವ ಸ್ಥಿತಿಗೆ ತಲುಪುವ ಅವಳ ಈ ಕಥೆ ಅಂದಿನ ಮತ್ತು ಇಂದಿನ ವೃತ್ತಿರಂಗಭೂಮಿಯ ಸ್ಥಿತಿಗೆ ಹಿಡಿದ ಕನ್ನಡಿ.

'ಇಷ್ಟು ನಕ್ಷತ್ರಗಳಲ್ಲಿ ಯಾವುದು ನನಗೆ'- ಮಧುಕರನ ಬೇರುಗಳ ತಾಕಲಾಟ intellectual ಬದುಕಿನ ಏಕತಾನತೆಯ ಬಗ್ಗೆಗಿನ ತಿರಸ್ಕಾರ, ಬೇಸರಿಕೆಯ ಜೀವದ ಹಳಹಳಿಕೆ ಹಾಗೂ ಯಾವುದೂ ತನ್ನದೆನ್ನಿಸದ ಭಾವದ ಕಥನ. ಯಾವತ್ತಿನ ನಿರಾಳ ಕನಸುಗಾರಿಕೆಯೇ ನೋವಿನ ಮೂಲವೆಂದು ಗೊತ್ತಿದ್ದರೂ, ನೋವಿನ ಮೂಲಕ್ಕೆ ಪ್ರತಿಕ್ರಿಯಿಸಲಾಗದೆ ಸೆಣಸಾಡುವುದರ ಮೂಲಕ ಬದುಕನ್ನು ಶೋಧಿಸುವ ಕಥನ. ನಗರ ಬದುಕಿನ ನಿಷ್ಕಾರುಣ ತಿರಸ್ಕಾರ ಈ ಕಥೆಯ ಸ್ಥಾಯಿಭಾವ. ಆದರೆ ಅದು ಸಿನಿಕತೆ ಇಲ್ಲದ ತಿರಸ್ಕಾರ ಎನ್ನುವುದು ಈ ಕಥೆಯ ಗುಣಾತ್ಮಕ ಅಂಶ.

'ಮಾಗಿ' ನೆನಪುಗಳಲ್ಲಿ ಹುಟ್ಟಿ, ಹಿಮ್ಮಿಂಚಿನಲ್ಲಿ ಅರಳುವ ಒಂದು ಸ್ವಗತದಂಥ ಕಥೆ

'ಮಾತು ಯಾತನೆಯ ದಿಡ್ಡಿ ಬಾಗಿಲು' - ಕ್ರಾಂತಿಗೆ ಹೇಳಿಮಾಡಿಸದ, ಆದರೆ ಅದಕ್ಕಾಗಿ ಕನಸುವ ಮಿಲಿಂದ ಸಂಬಂಧಗಳ ಹಿಂಸೆಯಲ್ಲಿ ನರಳುವ ಕಥೆ. Trade Unionism ಭಿತ್ತಿಯಲ್ಲಿ ಅರಳುವ ಈ ಕಥೆ 'ಹಿಂಸೆ'ಯನ್ನು ಸೂಕ್ಷ್ಮನೆಲೆಗಟ್ಟಿನಲ್ಲಿ ಶೋಧಿಸುವಲ್ಲಿ ಯಶಸ್ವಿಯಾಗುತ್ತದೆ.. ಮಿಲಿಂದ - ನಿಹಾರಿಕೆಯರ ನಡುವಿನ ಸಂಬಂಧ ಕಾವ್ಯದ ಗುಣ ಪಡೆದುಕೊಳ್ಳುವುದರಿಂದ ಕಥೆ ಹೊಸ ಅಂದ ಪಡೆದುಕೊಳ್ಳುತ್ತದೆ. ಗದ್ಯದಲ್ಲಿ ಕಾಣುವ ಪದ್ಯದಲಯದಂಥ ಕಥೆ ಇದು. ನಗರದ ಬದುಕನ್ನು ಆಕ್ರೋಶ, ಸಿನಿಕತೆ ಇಲ್ಲದೆ ನೋಡಿರುವುದು ಕಥೆಗೆ ಹೊಸ ಆಯಾಮ ನೀಡಿದೆ.

'ಧಾರಿಣಿ ಜೊತೆಗೆ ನನ್ನದೊಂದು ಕಥೆ'; ಕಥೆಗಾರನೇ ಹೇಳುವಂತೆ 'ಯಾರು ಕನಸಿನ ಹಾಕುಗಳನ್ನು ಮರಳಿ ಪಡೆದರೋ ಅಂಥವರ ಕಥೆ'. ಅನಾಥ ಪ್ರಜ್ಞೆ, ಏಕಾಕಿತನ, ಹಾಗೂ ಕುಟುಂಬದ ಹಿಂಸೆ ಇಲ್ಲಿನ ಸ್ಥಾಯಿಭಾವ. ಇದರಲ್ಲಿ ಋತುಗಳ ಮೆರವಣಿಗೆ ಕಾರ್ತೀಕದ ದೀಪದ ಸಾಲುಗಳಂತೆ. ಈ ಕಥೆ ಒಂದು ಮಾಮೂಲಿ ಪ್ರೇಮ ಕಥೆಯಾಗ ಬಹುದಿತ್ತು. ಆದರೆ ಗಾಢ ಪರಿಣಾಮ ಬೀರುವ ಹೊಸ ಬಗೆಯ ಬರವಣಿಗೆಯಿಂದ ಬೇರೆಯದೇ ಅನುಭವವನ್ನು ಕಟ್ಟಿ ಕೊಡುತ್ತದೆ.

'ಕಡಲ ತೆರೆಗೆ ದಂಡ'- ವರ್ತಮಾನದಾಚೆಯ ಕನಸಿನ ಗೊಂಚಲುಗಳಾಗಿ ಹಂಬಲಿಸುವ ಭೂಗತ ಕ್ರಾಂತಿಕಾರಿ ಪಕ್ಷದ ಸಕ್ರಿಯ ಸದಸ್ಯ ಅನ್ವರ್ ಕಥಾ ನಾಯಕ ಅಚ್ಯುತ, ಹಾಗೂ ಅವರ ಗೆಳೆಯ ಸತ್ಯ ಪ್ರಮೋದರ ಸತ್ಯ-ಸುಳ್ಳುಗಳ ನಡುವಿನ ಸಂಘರ್ಷದ ಕಥನ. ಆರಂಭದಲ್ಲಿ ಹಿಪಾಕ್ರಸಿಯೇ

ಮೂರ್ತಿವೆತ್ತಂತೆ ಕಾಣುವ. ಸತ್ಯ ಪ್ರಮೋದ ಅಂತಿಮವಾಗಿ ನಿಜಕ್ಕೆ ಮುಖಾಮುಖಿಯಾಗುವುದು ಕಥೆಯ ಸತ್ವಪೂರ್ಣತೆಗೆ ಹಿಡಿದ ಸಾಕ್ಷಿ. ಖಾಸನೀಸರ ಕಥೆಗಳ ದಟ್ಟ ಛಾಯ ಈ ಕಥೆಗೆ ಹೊಸ ಕಸುವು ನೀಡಿದೆ. 'ಬದಲಾವಣೆಗೆ, ಹಸಿವೆಗೆ, ಕನಸುಗಳಿಗೆ, ಗಟಾರದಲ್ಲಿ ಗುಲಾಬಿ ತೋಟ ಬೆಳೆಸುವ ಕನಸುಗಾರಿಕೆಗೆ ಬೇಕಿದ್ದರೆ 'ನಕ್ಸಲೈಟ್' ಎಂಬ ಹೆಸರು ಕೊಡಬಹುದು' ಎನ್ನುವ ಅನ್ವರ್‌ನ ನಿಗೂಢ ಸಾವು ಕಥೆಗಾರನನ್ನು ನಲುಗಿಸಿದಂತೆ, ಓದುಗರನ್ನೂ ವಿಷಾದದ ಅಂಚಿಗೆ ನೂಕುತ್ತದೆ. ಅನ್ವರ್‌ನನ್ನು ಲೇಖಕ ಚಿತ್ರಿಸುವ ರೀತಿ, ಕಥೆಗೆ ವಿಶಿಷ್ಟ ಓಟವೊಂದನ್ನು ಒದಗಿಸಿದೆ.

ಒಟ್ಟಾರೆಯಾಗಿ ಈ ಸಂಕಲನದಲ್ಲಿ ಕಥೆಗಾರ ವ್ಯಕ್ತಿಗಳನ್ನು ಜೀವನವನ್ನು ನೋಡುವ ಕ್ರಮವೇ ಕಥೆಗಳಿಗೆ ಒಂದು ರೀತಿ ವಿಶಿಷ್ಟತೆಯನ್ನು ತಂದುಕೊಡುತ್ತದೆ. ಕಥೆಗಳು ರೂಢಿಗತ ಜಾಡಿಗೆ ಬೀಳದೆ, ತೋಷಣಾತ್ಮಕವಾಗದೆ, ಪಾತ್ರಗಳನ್ನು ಕಪ್ಪುಬಿಳುಪೆಂದು ವಿಭಾಗಿಸದೆ, ಮಾನವೀಯ ಸಂಬಂಧಗಳನ್ನು ಶೋಧಿಸುತ್ತವೆ. ಕೆಲವು ಕಥೆಗಳು ತಮ್ಮ ಸರಳ ನಿರೂಪಣೆಯಿಂದಲೇ ಮನಸ್ಸು ಕಾಡುವಂಥ ಚಿತ್ರಗಳನ್ನು ಕಟ್ಟಿಕೊಡುತ್ತವೆ. ಮತ್ತೆ ಕೆಲವು ಕಥೆಗಳು ಕಾವ್ಯಕ್ಕೆ ಹತ್ತಿರವಾದ ತಮ್ಮ ಭಾಷೆಯಿಂದ ಚಿತ್ರಕ ಶಕ್ತಿ ಪಡೆದುಕೊಳ್ಳುತ್ತವೆ.

- ಭೂಮಿಕಾ

ಒಂದು ಮರೆತು ಹೋದ ಕತೆ - ಕಲಕತ್ತ ಗೌಹರ್ ಜಾನ್

- ಎ.ಎ.ಜೋಶಿ

1920ಕ್ಕೂ ಪೂರ್ವದಲ್ಲಿ ಮುದ್ರಿತವಾದ ತಮಿಳು ಪುಸ್ತಕವೊಂದರಲ್ಲಿ ಒಂದು ಭಾಗವನ್ನು ಕಲಕತ್ತ ಗೌಹರ್ ಜಾನ್‌ಳ ಗೀತೆಗಳಿಗಾಗಿಯೇ ಮುಡಿಪಾಗಿದೆ. ಎಲ್ಲ ಹಾಡುಗಳು ಉರ್ದು ಮತ್ತು ಇತರ ಉತ್ತರ ಭಾರತದ ಭಾಷಾ ಪ್ರಭೇದಗಳಲ್ಲಿವೆ. ತಮಿಳು ಭಾಷೆಯನ್ನಾಡುವ ಜನರು ಕಲಿಯಲು ಅನುಕೂಲವಾಗುವಂತೆ ಈ ಗೀತಾಗಳನ್ನು ತಮಿಳು ಲಿಪಿಯಲ್ಲಿ ಮುದ್ರಿಸಿದ್ದು, ಸ್ವರ ಪ್ರಸ್ತಾರವನ್ನೂ ಹಾಕಲಾಇದೆ. ದಕ್ಷಿಣ ಭಾರತದ ಕೇಳುಗರಲ್ಲಿ ಈ ತೆರನಾದ ಪ್ರಭಾವ ಬೀರಬಲ್ಲ ಪ್ರಸಿದ್ಧಿ ಈ ಗಾಯಕಿಯದು. ಈಕೆಯ ಪ್ರಭಾವದ ಇನ್ನೊಂದು ಮುಖದಲ್ಲಿ 1911ರಲ್ಲಿ ಚಕ್ರವರ್ತಿ ವಿ.ಜಾರ್ಜ್, ತನ್ನ ಚಕ್ರಾಧಿಪತ್ಯದ ದರ್ಬಾರನ್ನು ಭಾರತದ ದಿಲ್ಲಿಯಲ್ಲಿ ನಡೆಸಿದ ಸಂದರ್ಭದಲ್ಲಿ ಈಕೆ ರಾಜನಿಗಾಗಿ ಹಾಡಿದ ಗಾಯಕಿಯಾಗಿದ್ದಾಳೆ. 1902ರಲ್ಲಿ ಭಾರತದಲ್ಲಿ ಹಾಡಿನ ಮುದ್ರಣಕ್ಕಾಗಿ ಗ್ರಾಮಫೋನ್ ಕಂಪೆನಿಗೆ ಹಾಡಿದ ಪ್ರಪ್ರಥಮ ಗಾಯಕಿ ಎನಿಸಿದ್ದಾಳೆ. ಇವಳೊಂದಿಗೆ 100 ವರ್ಷಗಳ ಹಿಂದೆ 1902ರಲ್ಲಿ ಭಾರತೀಯ ಸಂಗೀತೋದ್ಯಮ ಉದಯವಾಯಿತು, ಇದೊಂದು ಗಮನಿಸದೇ ಹೋದ ಘಟನೆಯಾಗಿಯೇ ಉಳಿದಿದೆ.

'ಕಲಕತ್ತ ಗೌಹರ್ ಜಾನ್' ಇದು ಈಕೆಯ ಮೂಲ ಹೆಸರೂ ಅಲ್ಲ ಹಾಗೂ ಈಕೆ ಕಲಕತ್ತದವಳೂ ಅಲ್ಲ. ಈಕೆ ಜ್ಯೂಯಿಷ್ ಅರ್ಮೇನಿಯಂ ಸಂಜಾತೆ. ಈಕೆಯ ತಂದೆ ಅಜಂಗಢ ಮತ್ತು ಉತ್ತರ ಪ್ರದೇಶ ಕಾರ್ಯನಿರ್ವಹಿಸಿದ ರಾಬರ್ಟ ವಿಲಿಯಂ ಯೂವರ್ಡ್ ಮತ್ತು ತಾಯಿ ವಿಕ್ಟೋರಿಯಾ. 1873ರಲ್ಲಿ ಜನಿಸಿದ ಮಗುವಿಗೆ ಆ್ಯಂಜಲಿನಾ ಎಂದು ನಾಮಕರಣ ಮಾಡಿದರು. ವಿಕ್ಟೋರಿಯಾಳಿಗಿದ್ದ ಸಂಗೀತ ಮತ್ತು ನೃತ್ಯದ ವ್ಯಾಮೋಹ ಹಾಗೂ ಹುಚ್ಚುಗಳಿಂದಾಗಿ ರಾಬರ್ಟ್ ಅಳನ್ನು ಸಹಿಸದಾದ ಹಾಗೂ ಆಕೆ ತನ್ನ ಪ್ರಿಯಕರನಾದ ಖುರ್ಷಿದ್‌ನೊಂದಿಗೆ ವಾಸಿಸಲು ಆರಂಭಿಸಿದ ನಂತರ, ದಂಪತಿಗಳಿಬ್ಬರೂ ವಿಚ್ಛೇದನ ಹೊಂದಿದರು.

ವಿಕ್ಟೋರಿಯಾ, ಖುರ್ಷಿದ್, ಹಾಗೂ ಮಗು ಆ್ಯಂಜಲಿನಾಳೊಂದಿಗೆ ಬನಾರಸ್ ನಗರಕ್ಕೆ ಬಂದು ನೆಲೆಸಿದರು, ಅಲ್ಲಿ ತಾಯಿ ಮಗಳಿಬ್ಬರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು ಹಾಗೂ ವಿಕ್ಟೋರಿಯಾ ಮಲಕಾಳಾಗಿಯೂ, ಆ್ಯಂಜಲಿನಾ ಗೌಹರ್‌ಳಾಗಿಯೂ ಹೆಸರನ್ನು ಬದಲಾಯಿಸಿಕೊಂಡರು. ಮಲಕಾ ಸಂಪೂರ್ಣವಾಗಿ ತನ್ನನ್ನು ತಾನು ಪ್ರದರ್ಶನ ಕಲೆಗಳಲ್ಲಿ ತೊಡಗಿಸಿಕೊಂಡಳು ಹಾಗೂ ಅಲ್ಪ ಕಾಲದಲ್ಲಿಯೇ ನಗರದ ಅಗ್ರಮಾನ್ಯ ವೇಶ್ಯಾಂಗನೆಯಾಗಿ ಹೆಸರು ಮಾಡಿದಳು. ನಂತರಲದ್ಲಿ 'ಬಡಿ ಮಲಕಾ ಜಾನ್' ಎಂದು ಹೆಸರು ಪಡೆದಳು.

1883 ರಲ್ಲಿ ಬಡಿ ಮಲಕಾ ಜಾನ್ ಮತ್ತು ಗೌಹರ್ ಜಾನ್ ಇಬ್ಬರೂ ಸಾಮ್ರಾಜ್ಯದ ಎರಡನೇ ಅತ್ಯಂತ ದೊಡ್ಡ ನಗರ ಹಾಗೂ ಸಾಂಸ್ಕೃತಿಕ ಕೇಂದ್ರವೆನಿಸಿದ್ದ ಕಲಕತ್ತ ನಗರಕ್ಕೆ ಬಂದು ನೆಲೆಸಿದರು. ಚಿತ್ಪುರ್ ರಸ್ತೆಯಲ್ಲಿ ಬಡಿ ಮಲಕಾ ಮನೆಯೊಂದನ್ನು ಖರೀದಿಸಿದಳು. ಆಕೆ ತನ್ನ ಮಗಳಿಗೆ ಸಂಗೀತ ಮತ್ತು ನೃತ್ಯಗಳಲ್ಲಿ ಉತ್ಕೃಷ್ಟ ತರಬೇತಿಯನ್ನು ಕೊಡಿಸಿದಳು, ಹಾಗೂ ಗೌಹರ್ ಜಾನ್ 1888ರಲ್ಲಿ ತನ್ನ ಪ್ರಥಮ ಪ್ರದರ್ಶನವನ್ನು ದರ್ಭಾಂಗ್ ಸಭೆಯಲ್ಲಿ ನೀಡಿದಳು. ಕಲಕತ್ತ ನಗರದಲ್ಲಿ ತನ್ನ ಉತ್ಕೃಷ್ಟ ಕಥಕ್ ನೃತ್ಯ, ಹಾಗೂ ಗಝಲ್‌ಗಳಾದಿಯಾಗಿ ಧೃಪದ್‌ವರೆಗೆ ಮತ್ತು ಕೀರ್ತನೆಗಳ ವಿಶಾಲ ಸಂಗೀತ ಕೃತಿಗಳಿಂದ ಶ್ರೀಮಂತ ಜಮೀನ್ದಾರರು ಮತ್ತು ಅಧಿಕಾರಿಗಳಿಗೆ ಮನರಂಜನೆ ನೀಡುತ್ತಿದ್ದರೂ ಆಕೆಯ ಕೃಪಾಕಟಾಕ್ಷಕ್ಕಾಗಿ ಇವರು ಪೈಪೋಟಿ

ನಡೆಸುವ ಮಟ್ಟಿಗೆ ಹುಚ್ಚೆಬ್ಬಿಸಿದ್ದಳು. ಈಕೆ 'ಹಮ್‌ಡಮ್' ಎಂಬ ಕಾವ್ಯನಾಮದಿಂದ ಅನೇಕ ಕೃತಿಗಳನ್ನೂ ರಚಿಸಿದಳು. ಪೋಷಕರ ಕೃಪೆಯಿಂದಾಗಿ ಬಹು ಬೇಗನೇ ಸಂಪದ್ಭರಿತಳಾದಳು, ಅವರಿಗೆ ಕೃತಜ್ಞತೆಗಳು.

1902 ರಲ್ಲಿ ಫ್ರೆಡ್ರಿಕ್ ವಿಲಿಯಂ ಗೈಸಬರ್ಗ್ ಎಂಬುವವರನ್ನು ಗ್ರಾಮಫೋನ್ ಕಂಪನಿಯು ತನ್ನ ಪ್ರತಿನಿಧಿಯಾಗಿ ಭಾರತಕ್ಕೆ, ಭಾರತೀಯ ಗಾಯಕರನ್ನು ಗುರುತಿಸಿ ಅವರ ಧ್ವನಿಯನ್ನು ಮುದ್ರಿಸಿಕೊಳ್ಳಲೋಸುಗ ಕಳುಹಿಸಿತು. ಈ ಪ್ರತಿನಿಧಿಯು ಗೌಹರ್ ಜಾನ್‌ಳನ್ನು ಪ್ರಥಮದಲ್ಲಿ ಆಹ್ವಾನಿಸಿದನು ಮತ್ತು ಈಕೆಯ ಪ್ರಯತ್ನಕ್ಕೆ ಸಂಭಾವನೆಯಾಗಿ ರೂ. 3000 ನೀಡಿದರು. ಧ್ವನಿಮುದ್ರಣದ ಕೊನೆಯಲ್ಲಿ ಈಕೆಗೆ "ನನ್ನ ಹೆಸರು ಗೌಹರ್ ಜಾನ್" ಎಂದು ಹೇಳುವಂತೆ ತಿಳಿಸಿ ಆಧ್ವನಿಯನ್ನು ಮುದ್ರಿಸಿಕೊಳ್ಳಲಾಯಿತು, ಜರ್ಮನಿಯಲ್ಲಿಯ ಇಂಜಿನೀಯರುಗಳು ಧ್ವನಿಯನ್ನು ಮೂಲದಿಂದ ಪ್ರತಿ ಮಾಡುವಾಗ ಯಾವುದೇ ತಪ್ಪಿನಿಂದಾಗಿ ಗಾಯಕಿಗೆ ಸಲ್ಲತಕ್ಕ ಗೌರವದಿಂದ ವಂಚಿತಳಾಗಬಾರದು ಎಂಬುದೇ ಇದರ ಉದ್ದೇಶ.

ಮುಂದಿನ ವರ್ಷದಲ್ಲಿ ಧ್ವನಿ ತಟ್ಟೆಗಳು (Records) ಭಾರತಕ್ಕೆ ಬಂದಾಗ, ಅವುಗಳಿಗಾಗಿ ಬೇಡಿಕೆ ಅಗಾಧವಾಗಿತ್ತು. ಗೌಹರ್ ಜಾನ್‌ಳ ಖ್ಯಾತಿ ಹಬ್ಬಿತು, ಅವಳು ದೇಶದ ವಿವಿಧ ನಗರ, ಮಹಾನಗರಗಳಲ್ಲಿ ಸಂಚರಿಸಿ, ಪ್ರದರ್ಶನಗಳನ್ನು, ಸಂಗೀತ ಕಛೇರಿಗಳನ್ನು ನಡೆಸಿದಳು. 1907ರಲ್ಲಿ ಮುಂಬೈ ನಗರ ಸಭಾಂಗಣದಲ್ಲಿ ಪ್ರದರ್ಶನ ನೀಡಿದಳು. ಮುಂಬೈಯಲ್ಲಿರುವಾಗ ತನ್ನ ಬಹು ಸಮಯವನ್ನು ಮಹಾಲಕ್ಷ್ಮಿಯಲ್ಲಿರುವ ರೇಸ್‌ಕೋರ್ಸನಲ್ಲಿ ಕಳೆಯುತ್ತಿದ್ದಳು.

1910ರಲ್ಲಿ ಈಕೆ ಮದ್ರಾಸ್ ನಗರಕ್ಕೆ ಬಂದಳು. ಅಲ್ಲಿಯ 'ವಿಕ್ಟೋರಿಯಾ ಪಬ್ಲಿಕ್ ಹಾಲ್'ಸಿ.ಗೋಪಾಲ್ ಚೆಟ್ಟಿಯವರು ಈಕೆಯ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಆ ಕಾಲದಲ್ಲಿ ಈ ಪ್ರದರ್ಶನವು ರೂ.4000 ವನ್ನು ಆಕೆಗೆ ತಂದುಕೊಟ್ಟಿತು. ಮದ್ರಾಸ್‌ನಲ್ಲಿ ಈಕೆ ಜಾರ್ಜ್ ಟೌನ್‌ನಲ್ಲಿರುವ ತಂಬುಚೆಟ್ಟಿ ರಸ್ತೆಯಲ್ಲಿದ್ದ ಖ್ಯಾತ ಹಾಡುಗಾರ್ತಿ ಹಾಗೂ ದೇವದಾಸಿ 'ಸೇಲಂ ಗೋದಾವರಿ' ಎಂಬುವವರೊಂದಿಗಿದ್ದಳು. ಖ್ಯಾತ ವೀಣಾ ಧನಮ್ಮಾಳ್ ಎಂಬುವವರು ಈಕೆಯ ಗೌರವಾರ್ಥ ಭೋಜನಕೂಟವೊಂದನ್ನು ಏರ್ಪಡಿಸಿದ್ದರು, ಈ ಸಂದರ್ಭದಲ್ಲಿ ಗಂಧದ ಹಾರವನ್ನಿತ್ತು ಸನ್ಮಾನಿಸಿದರು. ಬ್ರಾಡ್ವೇಯ ಹ್ಯಾರಿಸನ್‌ರವರು ಅಡುಗೆಯ ನಿರ್ವಹಣೆಯನ್ನು ವಹಿಸಿಕೊಂಡಿದ್ದು ಸಾವಿರ ರೂಪಾಯಿಗಳಷ್ಟು ವೆಚ್ಚವಾಗಿತ್ತು. ಆದರೆ, ಈ ವೆಚ್ಚವು ಗೌಹರ್ ಜಾನ್‌ಳಿಗೆ ಭಾರೀ ವೆಚ್ಚವೆಂದೆನಿಸಿರಲಾರದು, ಏಕೆಂದರೆ ಆಕೆ ತನ್ನ ಪ್ರೀತಿಯ ಬೆಕ್ಕು ಮರಿ ಹಾಕಿದುದರ ಸಂತೋಷಕ್ಕಾಗಿ ಕಲಕತ್ತದಲ್ಲಿ ರೂ.20,000 ಗಳ ವೆಚ್ಚದಲ್ಲಿ ಔತಣ ಕೂಟವೊಂದನ್ನು ನೀಡಿದ್ದಳು.

ಕರ್ನಾಟಕ ಶೈಲಿಯ ಹಾಡುಗಾರಿಕೆಯ ಪ್ರಭಾವಕ್ಕೊಳಗಾಗಿ ಗೌಹರ್ ಜಾನ್ ವೀಣಾ ಧನಮ್ಮಾಳ್‌ರಿಂದ 'ಭಜನ್ ಪರುಲಾ' (ರಾಗ ಸುರುತ್ತಿ) ಎಂಬ ಗೀತೆಯನ್ನು ಕಲಿತಳು ಹಾಗೂ ಅದರ ಧ್ವನಿ ತಟ್ಟೆಗಳೂ ಬಳಕೆಗೆ ಬಂದವು. ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ ಮುಂತಾದ ಕಲಾವಿದರು ಈಕೆಯಿಂದ ಈಕೆಯ ಹಾಡುಗಳನ್ನು ಕಲಿತರು.

ತನ್ನ ಎಲ್ಲ ಸಾರ್ವಜನಿಕ ಪ್ರದರ್ಶನಕ್ಕೆ ಸಂಭಾವನೆ ಪಡೆಯುತ್ತಿದ್ದ, ಈಕೆಯ ಸಾಂಸಾರಿಕ ಜೀವನ ಸುಖಮಯವಾಗಿರಲ್ಲಿ. ತನ್ನ ಆಪ್ತ ಕಾರ್ಯದರ್ಶಿಯನ್ನೇ ವಿವಾಹವಾಗಿದ್ದಳು. ಆತ ಈಕೆಗೆ ವಿಶ್ವಾಸಾರ್ಹನಾಗಿರಲಿಲ್ಲ. ಇವರ ವಿಚ್ಛೇದನವೊಂದು ದೀರ್ಘಕಾಲಿನ ಬಗೆಹರಿಯದ ವ್ಯಾಜ್ಯವಾಗಿ ಪರಿಣಮಿಸಿತ್ತು. ನಂತರ ಈಕೆ ಅಮೃತ ವಾಗಲ್ ನಾಯಕ್ ಎಂಬುವವರೊಂದಿಗೆ ಮುಂಬೈನಲ್ಲಿ ವಾಸವಾಗಿದ್ದಳು. ಈತ ಕೆಲಕಾಲ ಗುಜರಾತಿ ರಂಗಮಂಚದ ಖ್ಯಾತ ನಟನಾಗಿದ್ದ. ಈ ಸಮಯದಲ್ಲಿ ಈತನಿಂದ ಹಲವಾರು ಗೀತೆಗಳನ್ನು ಕಲಿತಳು . ಈತ ಇದ್ದಕ್ಕಿದ್ದಂತೆ ಮರಣವನ್ನಪ್ಪಿದ ಕಾರಣ ಗೌಹರ್ ಜಾನ್ ಪಾತಾಳಕ್ಕೆ ತಳ್ಳಲ್ಪಟ್ಟಳು.

ಗೌಹರ್ ಜಾನ್ ಅಗಾಧವಾದ ಸಂಪತ್ತನ್ನು ಗಳಿಸಿದ್ದಳಾದರೂ, ಸಾಕಷ್ಟು ಹಣವನ್ನು ಉದಾರದಿಂದ ದಾನ ಮಾಡಿದ್ದಳು. ಇವಳ ಮಾನಸಿಕ ಸ್ಥಿತಿಯ ದುರುಪಯೋಗಪಡಿಸಿಕೊಂಡು ನಿರ್ಲಜ್ಯರಾದ ಈಕೆಯ ಸಂಬಂಧಿಕರು ಉಳಿದುದೆಲ್ಲವನ್ನೂ ಕಸಿದುಕೊಳ್ಳಲು ಪ್ರಯತ್ನಿಸಿದರು. ಆನಂತರ ಅವಳು ಉಸಿರುಗಟ್ಟುವ ವಾತಾವರಣವಿದ್ದ ದರ್ಭಾಂಗ್ ಮತ್ತು ಕಲಕತ್ತದಲ್ಲಿ ಕೆಲಕಾಲ ಕಳೆದಾದನಂತರ 'ಮುಳುಗುವವನಿಗೆ ಹುಲ್ಲುಕಡ್ಡಿಯ ಆಸರೆ' ಎಂಬಂತೆ ಬಂದ ಮೈಸೂರು ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ IV ಅವರ ಆಹ್ವಾನದ ಮೇರೆಗೆ ಮೈಸೂರಿಗೆ ಬಂದು ಮೈಸೂರು ರಾಜ್ಯದ ಕಲಾವಿದೆಯಾದಳು ಹಾಗೂ ಅಲ್ಲಿಯೇ 1930ರಲ್ಲಿ ತನ್ನ ಕೊನೆಯುಸಿರನ್ನೆಳೆದಳು.

ಈ ತೆರನಾಗಿ ಹಿಂದಿನ ಶತಮಾನದ ಒಬ್ಬ ಖ್ಯಾತ ಮತ್ತು ವರ್ಣರಂಜಿತ ಬದುಕಿನ ಕಲಾವಿದೆಯೊಬ್ಬಳ ಬದುಕು ಕೊನೆಗೊಂಡಿತು.

ಕೃಪೆ : ದಿ ನ್ಯೂ ಇಂಡಿಯನ್ ಎಕ್ಸಪ್ರೆಸ್
ದಿನಾಂಕ ಜುಲಾಯಿ 6, 2003

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 100 ರೂ

ಸಂಸ್ಥೆಗಳಿಗೆ : 150 ರೂ

ಸಂ.ಮಂಡಳಿ

REGD No. : CPMG/KA/BGE/289/2003 - 05

BOOK-POST
PRINTED MATTER

ವಿಳಾಸ :

ಮಾನಸ

ಪಂಚಾಯಿತಿ ರಸ್ತೆ, ಕಾಡುಗೋಡಿ

ಬೆಂಗಳೂರು - 560 067